ಕಾಮ್ ಪುಸ್ತಕ – 16

# ಬರವನ್ನೇ ಮಣಿಸಿದ ಮಲ್ಲಣ್ಣ

ಶ್ರೀ ಪಡ್ರೆ

ಪ್ರಕಾಶನ
ಕೃಷಿ ಮಾಧ್ಯಮ ಕೇಂದ್ರ
ಧಾರವಾಡ



Baravanne Manisida Mallanna - An account of drought-proofing techniques adopted and disseminated by Dr. Mallanna Nagaral, farmer scientist, Hunagund Taluk, Bagalkote District - documented by Shree Padre, Journalist, Post: Vaninagar, Kasargod District, Kerala Tel: 04998-266148; Published by Centre for Agricultural Media, #119, 1st Main, 4th Cross, Narayanapur, Dharwad - 580 008. Tel: 0836-2444736.

| | | |
|---|---|---|
| ಮೊದಲ ಮುದ್ರಣ | : | ನವೆಂಬರ್ 2011 |
| ಪುಟಗಳು | : | iv+32 |
| ಹಕ್ಕುಗಳು | : | ಕೃಷಿ ಮಾಧ್ಯಮ ಕೇಂದ್ರ |
| ಬೆಲೆ | : | ರೂ.25 |
| ಚಿತ್ರಗಳು | : | ಶ್ರೀ ಪಡ್ರೆ |
| ವಿನ್ಯಾಸ | : | ಆರ್ಟಿಕ್, ಧಾರವಾಡ |
| ಪ್ರಕಾಶನ | : | ಕೃಷಿ ಮಾಧ್ಯಮ ಕೇಂದ್ರ<br>119, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ<br>ನಾರಾಯಣಪುರ, ಧಾರವಾಡ – 580 008<br>ದೂರವಾಣಿ: 0836–2444736<br>Email: agriculturalmedia@gmail.com<br>Website: www.krushimadhyama.org |
| ಮುದ್ರಣ | : | ರೀಗಲ್ ಪ್ರಿಂಟ್ ಸರ್ವಿಸ್, ಬೆಂಗಳೂರು<br>9964351655 |


## ಬಯಲು ಸೀಮೆಯಲ್ಲಿ ಸಾಕ್ಷಾತ್ಕರಿಸಿದ ಬರನಿರೋಧಕ ಜಾಣ್ಮೆ

ಉತ್ತರ ಕರ್ನಾಟಕದ ಹೆಚ್ಚಿನ ಪ್ರದೇಶವನ್ನು ಆವರಿಸಿರುವ ಕಪ್ಪು ಎರೆಮಣ್ಣಿಗೆ ನೀರನ್ನು ಹಿಡಿದುಕೊಳ್ಳುವ ಸಾಮರ್ಥ್ಯ ಹೆಚ್ಚು. ಆದರೆ ಹೀರಿಕೊಳ್ಳುವುದು ಕಡಿಮೆ. ಹಾಗಾಗಿ ಮಣ್ಣಿನ ಸವಕಳಿ ಅಧಿಕ. ಮಳೆಯೂ ಮುನಿದರೆ ಬೆಳೆ, ಬದುಕು ಅನಿಶ್ಚಿತ. ಇಂತಹ ಪರಿಸ್ಥಿತಿಯಲ್ಲಿ, ದಶಕದ ಹಿಂದೆ ಮೂರು ವರ್ಷ ಎಡೆಬಿಡದೆ ಬರಗಾಲ ಆವರಿಸಿದಾಗ ಸಾವಿರಾರು ರೈತರಿಗೆ ಬೇರೆ ಊರುಗಳಿಗೆ ಗುಳೆ ಹೋಗುವುದು ಅನಿವಾರ್ಯವಾಯಿತು. ಆದರೆ ರಾಜ್ಯದಲ್ಲೇ ಅತಿ ಕಡಿಮೆ ಮಳೆಯಾಗುವ ಬಾಗಲಕೋಟೆ ಜಿಲ್ಲೆ ಹುನಗುಂದದ ಸುತ್ತಲ ರೈತರಿಗೆ ಆಹಾರಕ್ಕಾಗಿ ಊರೂರು ಅರಸುವ ಪರಿಸ್ಥಿತಿ ಬರಲಿಲ್ಲ. ಆಗಾಗಲೇ 'ತಿದ್ದಿಸಿಕೊಂಡಿದ್ದ' ಅವರ ಹೊಲಗಳು ಮನೆಗಾಗುವಷ್ಟು ಆಹಾರ ಧಾನ್ಯಗಳನ್ನು ಬೆಳೆಯಲು ಶಕ್ತವಾಗಿದ್ದವು.

ಹೊಲ ತಿದ್ದಿಸುವುದರ ಹಿಂದಿರುವ ಉದ್ದೇಶ ಮಣ್ಣು ಹಾಗೂ ನೀರಿನ ಸಂರಕ್ಷಣೆ. ಹೊಲ ತಿದ್ದಿಸಿದರೆ ಪ್ರಯೋಜನವಿದೆ ಎನ್ನುವುದನ್ನು ಹುನಗುಂದದ ಸುತ್ತಮುತ್ತಲ ರೈತರು ಪ್ರತ್ಯಕ್ಷ ಅನುಭವಿಸಿದವರು. ಹಿಡುವಳಿ ಸಣ್ಣದೇ ಇರಲಿ ಅಥವಾ ನೂರಾರು ಎಕರೆ ಇರಲಿ, ಹುನಗುಂದದ ನಾಗರಾಳ ಕುಟುಂಬ ಶತಮಾನದ ಹಿಂದೆ ತಮ್ಮ ಹೊಲದಲ್ಲೇ ಪ್ರಾರಂಭಿಸಿದ ಈ ನೆಲ–ಜಲ ಸಂರಕ್ಷಣೆಯ ಮಾದರಿ ಉಪಯುಕ್ತ ಎನಿಸಿದೆ.



ಘನಮಠ ಶಿವಯೋಗಿ ಸ್ವಾಮೀಜಿ ಬರೆದ 'ಕೃಷಿಜ್ಞಾನ ಪ್ರದೀಪಿಕೆ' ಪುಸ್ತಕದ ಪ್ರೇರಣೆಯಿಂದ ಅಜ್ಜ ಸಂಗನಬಸಪ್ಪ ಪ್ರಾರಂಭಿಸಿದ ಹೊಲ ತಿದ್ದುವ ಕಾರ್ಯವನ್ನು ಅವರ ಮಗ ಶಂಕ್ರಣ್ಣ ಮುಂದುವರಿಸಿದರು. ಆ

ಕುಟುಂಬದ ವರ್ತಮಾನದ ಕೊಂಡಿ, ರೈತ ವಿಜ್ಞಾನಿ ಡಾ. ಮಲ್ಲಣ್ಣ ನಾಗರಾಳ ನೆಲ–ಜಲ ಸಂರಕ್ಷಣೆಯ ಈ ಜ್ಞಾನವನ್ನು ಇನ್ನಷ್ಟು ವಿಸ್ತರಿಸುತ್ತಿದ್ದಾರೆ.

ಮಲ್ಲಣ್ಣ ವರ್ಷದಲ್ಲಿ ಎರಡು ತಿಂಗಳು ಇತರರ ಹೊಲ ತಿದ್ದಿಸುವುದರಲ್ಲಿ ತತ್ಪರ. ಇದಕ್ಕೆ ಅವರು ಯಾವ ಪ್ರತಿಫಲವನ್ನೂ ಬಯಸುವುದಿಲ್ಲ. ತನ್ನಂತೆ ಇತರರ ಹೊಟ್ಟೆ ತುಂಬುವುದೂ ಮುಖ್ಯ ಎನ್ನುವ ಸಮಾಜಮುಖಿ ಮನಸ್ಸು ಅವರದು. ಈ ಭಾಗದ ನೆಲ–ಜಲ ಸಂರಕ್ಷಣೆಗೆ ಅವರ ಕೊಡುಗೆಯನ್ನು ಗಮನಿಸಿದ ಧಾರವಾಡ ಕೃಷಿ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಬಿಜಾಪುರದ ಪ್ರಾದೇಶಿಕ ಸಂಶೋಧನಾ ಕೇಂದ್ರ ಈ ಪ್ರದೇಶದ ಭೂ ಮತ್ತು ಕೃಷಿ ಅಭಿವೃದ್ಧಿಗಾಗಿ ಡಾ. ಮಲ್ಲಣ್ಣ ಅವರ ಜೊತೆ ಕೈಜೋಡಿಸಿದೆ. ಕೇಂದ್ರದ ಹಿರಿಯ ವಿಜ್ಞಾನಿ ಡಾ. ಮುದುಕಪ್ಪ ಬಿ. ಗುಳೇದ್ ಹೇಳುವಂತೆ ನಾಗರಾಳ ಕುಟುಂಬದ ಬರನಿರೋಧಕ ಕ್ರಮಗಳು ಬಾಗಲಕೋಟೆ, ಬಿಜಾಪುರ, ರಾಯಚೂರು, ಗದಗ ಸೇರಿದಂತೆ ಉತ್ತರ ಕರ್ನಾಟಕದ ಸುಮಾರು ಎಂಟು ಜಿಲ್ಲೆಗಳಿಗೆ ಪ್ರಸ್ತುತ.

ನೆಲ–ಜಲ ಸಂರಕ್ಷಣೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ಹಿರಿಯ ಪತ್ರಕರ್ತ ಶ್ರೀ ಪಡ್ರೆ ಅವರು ನಾಗರಾಳ ಕುಟುಂಬದ 'ಹೊಲ ತಿದ್ದಿಸುವ' ಕಾಯಕ, ಅದರ ಅಗತ್ಯ, ಕ್ರಮ, ಪರಿಣಾಮ, ಸಾಧ್ಯತೆಗಳನ್ನು ಅತ್ಯಂತ ವಿವರವಾಗಿ, ಸರಳವಾಗಿ ಈ ಪುಸ್ತಕದಲ್ಲಿ ಹೇಳಿದ್ದಾರೆ. ಡಾ. ಮಲ್ಲಣ್ಣ ನಾಗರಾಳ ಹಾಗೂ ಶ್ರೀ ಪಡ್ರೆ ಅವರಿಗೆ ನಮ್ಮ ನಮನಗಳು.

'ಬರಕಾಮಗಾರಿ' ಎಂಬ ಮಾತು ಮತ್ತೆ ಮತ್ತೆ ಕೇಳಿ ಬರುತ್ತಿರುವ ಸದ್ಯದ ಸನ್ನಿವೇಶದಲ್ಲಿ ಬರನಿರೋಧಕ ಶಕ್ತಿಯನ್ನು ಭೂಮಿಯಲ್ಲಿ, ಆ ಮೂಲಕ ಕೃಷಿಕರಲ್ಲಿ ತುಂಬುವ ಇಂತಹ ಪ್ರಯೋಗಗಳ ಅಗತ್ಯವಿದೆ. ಕೃಷಿ ಸಮುದಾಯಗಳೂ, ಸರಕಾರವೂ ಈ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ. ಕೃಷಿಯಲ್ಲಿ ಸುಸ್ಥಿರತೆ ತರುವ ನಾಗರಾಳ ಕುಟುಂಬದ ಪ್ರಯೋಗಗಳು, ಅದರ ಹಿಂದಿರುವ ಕಾಳಜಿ ಇನ್ನಷ್ಟು ಮಂದಿಗೆ ಪ್ರಯೋಜನವಾಗಲಿ, ಸ್ಫೂರ್ತಿ ನೀಡಲಿ ಎಂದು ಆಶಿಸುತ್ತೇವೆ.

– ಅನಿತಾ ಪೈಲೂರು
ಅಧ್ಯಕ್ಷೆ

## ಬರವನ್ನೇ ಮಣಿಸಿದ ಮಲ್ಲಣ್ಣ


ಕನ್ನಾಡಲ್ಲೇ ಕನಿಷ್ಠ ಮಳೆಭಾಗ್ಯದ ಜಿಲ್ಲೆ ಬಾಗಲಕೋಟೆ. 2001ರಿಂದ 2003 ಈ ಜಿಲ್ಲೆಗೆ ಬಲು ಕೆಟ್ಟ ಕಾಲ. ಸತತ ಮೂರು ವರ್ಷ ಅಭೂತಪೂರ್ವ ಕ್ಷಾಮ.

ಮೂಟೆಗಟ್ಟಲೆ ಧಾನ್ಯ ಮಾರುತ್ತಿದ್ದ ರೈತರೂ ಆ ವರ್ಷ ಕಂಗಾಲು. ತಮ್ಮ ಹೊಲ ಕೊಟ್ಟ ಚೂರುಪಾರು ಸಾಕಾಗದೆ ಅಂಗಡಿಯಿಂದ ಉದ್ರಿ ತರಬೇಕಾಯಿತು. ಅದೆಷ್ಟೋ ಮಂದಿ ಉದ್ಯೋಗ ಅರಸಿ ಹೊರಜಿಲ್ಲೆಗಳಿಗೆ ಧಾವಿಸಿದರು.

ಆದರೆ ಆಶ್ಚರ್ಯ, ಅದೇ ಜಿಲ್ಲೆಯ ಹುನಗುಂದ ರೈತರು ಬೆಚ್ಚಲಿಲ್ಲ. ಗುಳೇ ಹೋಗಲಿಲ್ಲ. ಅವರ ಹೊಟ್ಟೆಪಾಡಿಗೆ ಆಗಿ ಮಿಗುವಷ್ಟು ಧಾನ್ಯವನ್ನು ಎಲ್ಲರ ಹೊಲಗಳೂ ಕರುಣಿಸಿದ್ದುವು!

ಇದು ಎಂಟು–ಹತ್ತು ವರ್ಷಗಳ ಬದಲಾವಣೆಯಲ್ಲ. ಅಲ್ಲಿನ ಯತ್ನಗಳಿಗೆ ಶತಮಾನದ ಚರಿತ್ರೆಯಿದೆ. ಸರಕಾರಿ ಯೋಜನೆಗಳ ಸಬ್ಸಿಡಿಯ ಆಸೆಯ ಕೆಲಸವೂ ಅದಲ್ಲ. ತಾಲೂಕಿನ ರೈತಕುಟುಂಬವೊಂದರ ಮೂರು ತಲೆಮಾರುಗಳ ಶತಮಾನದ ತಪಸ್ಸಿನ ಫಲವದು!





ಇಳುಕಲು ಇರುವಲ್ಲಿ ಮಳೆನೀರು, ಅದರೊಂದಿಗೆ ಫಲವತ್ತಾದ ಮಣ್ಣು ಓಡುತ್ತಿರುವುದು ಇಲ್ಲಿ ಸ್ಪಷ್ಟ

ಹೊಲ ತಿದ್ದಿಸಿಕೊಂಡ್ರೆ ಫಲ ಇದೆ ಅನ್ನೋದನ್ನ ಹುನಗುಂದ ರೈತರು ಕಣ್ಣಾರೆ ಕಂಡವರು. ಸಾಲಸೋಲ ಮಾಡಿ ಒಡ್ಡು ಹಾಕಿಸಿಕೊಂಡವರು. ಸ್ವಇಚ್ಛೆ, ಬೆವರಿನ ಹಣದಿಂದ ಮಾಡಿದ ಕೆಲಸವದು. ಅದಕ್ಕೇ 'ಎ ಕ್ಲಾಸ್' ಕಾಮಗಾರಿ.

ಅವರಿಗೆ ಪ್ರೇರಣೆ ಡಾ. ಮಲ್ಲಣ್ಣ ನಾಗರಾಳ್(60). ಈ ಮಹನೀಯರ ಜತೆ ಅರ್ಧ ದಿನ ಪಯಣಿಸಿ ನೋಡಿ. ನೀವೇ ಮಾತಾಡುತ್ತಿದ್ದರೆ ಮಲ್ಲಣ್ಣ ಮೌನಕ್ಕೆ ಶರಣಾದಾರು. ಅವರ ಮಾತಿಗೆ ಅವಕಾಶ ಕೊಟ್ಟು ನೋಡಿ.

ಪಯಣ ಕಾರಿನಲ್ಲಿರಲಿ, ಟ್ರಾಕ್ಟರ್, ಕಾಲ್ನಡೆಯಲ್ಲೇ ಆಗಲಿ ಮಲ್ಲಣ್ಣರಿಗೆ ರಸ್ತೆಯ ಇಕ್ಕೆಲಗಳಲ್ಲಿ ಥಟ್ಟೆಂದು ಕಾಣಿಸುವುದು ಅವನತಿ. ಮಣ್ಣಿನ ಸವಕಳಿ. 'ನೋಡ್ರಿ ಸಾಹೇಬ್ರೇ, ಹರಿ ಬಿದ್ದು ಕೆನೆ ಮಣ್ಣೆಲ್ಲಾ ಕೊಚ್ಚಿಕೊಂಡು ಹೋಗ್ಯಾದ. ವರ್ಷಾಂತರದಲ್ಲಿ ಇಲ್ಲಿ ಏನು ಬೆಳೆ ಬಂದೀತು?' ಮಲ್ಲಣ್ಣರ ಈ ಪ್ರಶ್ನೆ ಕೇಳಿ ಎಲ್ಲಿ ಸವಕಳಿ ಬಿದ್ದಿದೆ, ಕೆನೆ ಮಣ್ಣು ಹರಿದು ಹೋದದ್ದು ಹೌದೇ ಅಂತೆಲ್ಲಾ ಜತೆಯಲ್ಲಿದ್ದವರಿಗೆ ಹೊಳೆಯಬೇಕಾದರೆ ನಿಮಿಷ, ಗಂಟೆಗಳೇ ಬೇಕು!



ಸವಕಳಿಯಾದ ಹೊಲದ 'ತೆಂಬ'(ದಿಬ್ಬ), ನೀರಿನ ಹರಿ(ಪ್ರವಾಹ), ಯಾವ ಬದಿಗೆ ಇಳುಕಲು ಇದೆ ಎಂಬುದನ್ನೆಲ್ಲಾ ಮಲ್ಲಣ್ಣ ನಾಗರಾಳರ ಒಳಗಣ್ಣು ಥಟ್ಟೆಂದು ಗುರುತಿಸಿಬಿಡುತ್ತದೆ. ಅವರದು ಎಕ್ಸ್‌ರೇ ದೃಷ್ಟಿ!

**ನಿಧಾನ ಸಾವು**

ಮಣ್ಣಿನ ಸವಕಳಿ ಬೆಳೆಗಾರನ ಮಟ್ಟಿಗೆ 'ನಿಧಾನ ಸಾವು.' ಮಣ್ಣನ್ನೇ ನಂಬಿ ಅನ್ನ ಬೆಳೆಯುವ ನೂರಾರು, ಸಾವಿರಾರು ರೈತರಿಗೆ, ಪಾಪ, ತಂತಮ್ಮ ಜಮೀನುಗಳಲ್ಲಿ ಈ ಅಪಾಯದ ಕುರುಹುಗಳು ಗೋಚರಿಸುವುದೇ ಇಲ್ಲ.

'ಹೊಲ ತಿದ್ದುವುದು' ಅಂದರೆ ಇವರ ಪರಿಭಾಷೆಯಲ್ಲಿ ಮಣ್ಣು-ನೀರು ಸಂರಕ್ಷಣೆ. ನಿಜವಾಗಿ, ಇವರದು ಇದಕ್ಕೂ ಹೆಚ್ಚಿನ – ಬರ ನಿರೋಧಕ ಕೆಲಸ(drought proofing). ಈ ಜನಪರ ಸೇವೆ ಆರಂಭವಾದದ್ದು ಅಜ್ಜ ಸಂಗನಬಸಪ್ಪರಿಂದ. ಅವರಿಗೆ ಪ್ರೇರಣೆ 175 ವರುಷ ಹಿಂದೆ ಘನಮಠ ಶಿವಯೋಗಿ ಸ್ವಾಮೀಜಿ ಬರೆದ 'ಕೃಷಿಜ್ಞಾನ ಪ್ರದೀಪಿಕೆ' ಪುಸ್ತಕ.

ಬರಬರುತ್ತಾ ಪುಸ್ತಕದ ಮಾಹಿತಿಗೆ ಮಸ್ತಕದಲ್ಲಿ ಹೊಸದಾಗಿ ಸೇರಿಕೊಂಡ ಸ್ವಾನುಭವವೂ ಜತೆಗೂಡಿತು. ಸಂಗನಬಸಪ್ಪ ಆರಂಭಿಸಿದ ಕೆಲಸವನ್ನು ಮಗ ಶಂಕ್ರಣ್ಣ ಇನ್ನೂ ವ್ಯಾಪಕವಾಗಿ ಮಾಡುತ್ತಾ ಬಂದರು. ಮಲ್ಲಣ್ಣ ಅದನ್ನು ತುಂಬು ಪ್ರೀತಿಯಿಂದ ಮುಂದುವರಿಸಿದ್ದಾರೆ. ಇವರಾರೂ ಈ ಕೆಲಸಕ್ಕಾಗಿ ಚಿಕ್ಕಾಸು ಪಡೆದವರಲ್ಲ.

ಮಲ್ಲಣ್ಣನಿಗೀಗ ವರ್ಷಕ್ಕೆ ಎರಡು ತಿಂಗಳು ಹೊಲ ತಿದ್ದಿಸೋಕೇ ಬೇಕು. ಉರಿಬಿಸಿಲಲ್ಲಿ ನಿಂತು ಮಾರ್ಗದರ್ಶನ ಕೊಡಬೇಕು. ಆದರೂ ಅವರು ಇದಕ್ಕೆ ಶುಲ್ಕ ವಿಧಿಸುವುದಿಲ್ಲ. ಪ್ರಯಾಣ ವೆಚ್ಚವನ್ನೂ ಕೇಳುವುದಿಲ್ಲ.

'ಶುಲ್ಕ ವಿಧಿಸಿದರೆ ಅದು ಸೇವೆ ಆಗುವುದಿಲ್ಲ. ಈ ವರ್ಷ ನೋಡಿ, ನಮ್ಮ ಹೊಲದಲ್ಲಿ ನೆಲಗಡಲೆಯ ಬಂಪರ್ ಬೆಳೆ ಬಂತು. ಭೂಮಿತಾಯಿ ಮರಳಿ ಕೊಡುತ್ತಾಳೆ, ಹೌದಲ್ಲಾ? ಒಂದಷ್ಟು ಚೀಲ ಹೆಚ್ಚು ಬೆಳೆ ಸಿಕ್ಕಿದರೆ ನನ್ನ ಪ್ರತಿಫಲ ಅದರಲ್ಲೇ ಬಂತು ಬಿಡಿ' ಎನ್ನುತ್ತಾ ಬಾಯ್ತುಂಬಾ ನಗುತ್ತಾರೆ.

## ಅಪಾರ ಮಣ್ಣಿನ ಸವಕಳಿ

ಹಿಂದೆ ಬಿಜಾಪುರ ಜಿಲ್ಲೆಯಲ್ಲಿದ್ದ ಹುನಗುಂದ ತಾಲೂಕು ಈಗ ಬಾಗಲಕೋಟೆ ಜಿಲ್ಲೆ ಸೇರಿದೆ. ಇಲ್ಲಿನ ಹೆಚ್ಚಿನ ಭಾಗದಲ್ಲೂ ಕಪ್ಪು ಹತ್ತಿ(black cotton soil, vertisol) ಮಣ್ಣು ಅಥವಾ ಎರಿ ಮಣ್ಣು ಇದೆ. ಈ ಮಣ್ಣಿನ ನೀರು ಹಿಡಿದುಕೊಳ್ಳುವ ಶಕ್ತಿ ಅಪಾರ; ಸವಕಳಿಯೂ ಹಾಗೆಯೇ.

'ರಭಸದ ಮಳೆಯೊಂದಕ್ಕೆ ಒಂದೆಕರೆ ಹೊಲದಿಂದ ಇನ್ನೂರು ಚಕ್ಕಡಿ ಮಣ್ಣು ಹೊರಹರಿಯುತ್ತದೆ' ಬೊಟ್ಟು ಮಾಡುತ್ತಾರೆ ಮಲ್ಲಣ್ಣ. ಸರಿಯಾಗಿ ಮಣ್ಣು ಸಂರಕ್ಷಣೆ ಮಾಡದೆ ಕೃಷಿ ಇಲ್ಲಿ ಗೆಲ್ಲುವುದಿಲ್ಲ.

ವಿವರಿಸುತ್ತಾರೆ ಮಲ್ಲಣ್ಣ : 'ಆನಿ ಎತ್ತರ ಹರಿದು ಬರುವ ನೀರು ಗೇಣೆತ್ತರ ಹರಿಯುವಂತೆ ಮಾಡಬೇಕು. ಇಳುಕಲಿಗೆ ಅಡ್ಡಲಾಗಿ ಒಡ್ಡು ಹಾಕಬೇಕು. ನೀರು ಹರಿದು ಸವಕಳಿ ಆದ ಕೊರಕಲಿಗೆ 'ನೀರ ಹರಿ' ಎನ್ನುವರು. ಇದನ್ನು ಅಡ್ಡಗಟ್ಟಿ ಹೊಲವನ್ನು ಸಮಪಾತಳಿ ಮಾಡಬೇಕು. ನೀರಿನ ಕೂಡ ಹರಿದು ಬಂದ ಮಣ್ಣನ್ನು



'ಆನಿ ಎತ್ತರ ಬಂದ ನೀರನ್ನಿದು ಗೇಣೆತ್ತರ ಮಾಡಿಕೊಡುತ್ತ ನೋಡ್ರಿ'



ಒಡ್ಡು ಹೊಲದಲ್ಲಿಯೇ ಉಳಿಸುತ್ತದೆ. ಮೇಲ್ಭಾಗದಿಂದ ಬರುವ ಮಣ್ಣು ತುಂಬಿತುಂಬಿ ಹೊಲ 'ಕೆರೆಯಂತೆ' ಸಮನೆಲ ಆಗುವುದು.'

ಸಮತಟ್ಟಿದ್ದಂತೆ ಕಾಣುವ ಕೆಲವು ಹೊಲಗಳಲ್ಲೂ ಕಡಿಮೆ ಇಳುಕಲು ಇರುತ್ತದೆ. ಚೆನ್ನಾಗಿ ಮಳೆ ಬಿದ್ದಾಗ ಹಸಿಯಾಗುತ್ತದೆ. ಮಳೆ ಕಡಿಮೆಯಾಯಿತೋ, ಹೆಚ್ಚಿನ ನೀರೂ ಹರಿದಿಳಿದು ಮೇಲ್ಮಣ್ಣಿನ ಜತೆಗೆ ಓಡುತ್ತದೆ.

ಹೊಲ ಸಮತಟ್ಟು ಮಾಡುವುದನ್ನು 'ಅಂಗಳ ಮಾಡುವುದು' ಎನ್ನುತ್ತಾರೆ. ಅಂಗಳ ವಿಶಾಲವಾದಷ್ಟೂ ಒಂದೇ ಪ್ರಮಾಣದಲ್ಲಿ ಹಸಿ ಆಗುತ್ತದೆ. ಫಸಲೂ ಜಾಸ್ತಿ. ಇದಕ್ಕೇ ಮಲ್ಲಣ್ಣ 'ಹೊಲ ನಾಲ್ಕೂ ಕಡೆ ಕಟ್ಟು ಹಾಕಿರುವ ಪಾಟಿಯಂತೆ(ಸ್ಲೇಟಿನಂತೆ) ಅಥವಾ ಅಂಗೈಯಂತೆ ಇರಬೇಕು' ಎನ್ನುವುದು.

ಕೆಂಪು(ಮಸಾರಿ) ಮಣ್ಣಿನಲ್ಲಿ ಸಚ್ಛಿದ್ರತೆ(porosity) ಜಾಸ್ತಿ. ಮಳೆನೀರು ಇಂಗುವುದು ಹೆಚ್ಚು; ಸವಕಳಿ ಕಡಿಮೆ. ಜಿಗುಟಾದ ಈ ಕಪ್ಪು ಮಣ್ಣಿನ ಕಣಗಳ ನಡುವೆ ರಂಧ್ರ ಕಡಿಮೆ. ಬಿದ್ದ ಮಳೆಯ ನೀರು ಬಹುಪಾಲೂ ಇಂಗದೆ ಇಳುಕಲಿನತ್ತ ಹರಿಯುತ್ತದೆ.

ಹೊಲದ ಮೇಲ್ಭಾಗದಲ್ಲಿ ಮಳೆನೀರು ಹರಿದಿಳಿಯುವ ಪ್ರದೇಶ ಇಲ್ಲದಿರುವ ಹೊಲಗಳೂ ಇರುತ್ತವೆ. ಇಂಥವುಗಳಿಗೂ ಸುರಿಯುವ ಮಳೆನೀರನ್ನು ಕಾಪಿಡಲು ಒಡ್ಡು ಬೇಕು. ಅದು ಹೆಚ್ಚುವರಿ ನೀರನ್ನು ಹೊರಬಿಟ್ಟು ಕೆನೆಮಣ್ಣನ್ನು ಅಲ್ಲೇ ತಡೆಯುತ್ತದೆ.

## ಮಳೆ ನೋಡಿ ಕಲ್ಲು

ಮಳೆನಕ್ಷತ್ರಗಳಲ್ಲಿ ಮಳೆಯೆಷ್ಟು ಬಂದಿದೆ ಎಂಬುದನ್ನು ಆಧರಿಸಿ ರೈತರು ಗುಂಡಾವರ್ತಿಗೆ ಅಡ್ಡ ಕಲ್ಲು ಇಡಬೇಕೇ, ಬೇಡವೇ ಎಂದು ನಿರ್ಧರಿಸುತ್ತಾರೆ.

ಸಾಮಾನ್ಯವಾಗಿ ಬೇಸಿಗೆ ಕಾಲ ಮಳೆ – ಅಂದರೆ ರೋಹಿಣಿ(ಮೇ), ಮೃಗಶಿರ(ಜೂನ್)ಗಳು ಅಷ್ಟು ರಭಸವಾಗಿರುವುದಿಲ್ಲ. ಆಗ ಗುಂಡಾವರ್ತಿಗೆ ಕಲ್ಲು ಅಡ್ಡ ಇಟ್ಟಿರುತ್ತಾರೆ. ಅನಂತರ ತೆಗೆದಿಟ್ಟ ಕಲ್ಲು ಪುನಃ ಬಂದ್ ಮಾಡುವುದು ಅಕಸ್ಮಾತ್ತಾಗಿ ಉತ್ತರಿ ಮಳೆ ಪೂರ್ತಿ ವಿಫಲವಾದರೆ. ಇದರಿಂದಾಗಿ ಮತ್ತೆ ಹಸ್ತಾ ಮಳೆಯ ಬಹುಪಾಲು ಹೊಲದಲ್ಲೇ ಉಳಿಯುತ್ತದೆ.

### ತಳ ಒಡ್ಡು ಅತಿ ಮುಖ್ಯ

ಹೊಲದ ಕೆಳಭಾಗದಲ್ಲಿ ರಚಿಸುವುದೇ 'ತಳ ಒಡ್ಡು.' ಇದಕ್ಕೆ ವೆಚ್ಚ ಜಾಸ್ತಿ. ಮೇಲಿನಿಂದ ಬರುವ ನೀರಿನ ಪ್ರಮಾಣ ಅನುಸರಿಸಿ ಇದರ ಭದ್ರತೆ ನಿರ್ಧರಿಸಬೇಕು.

ಮಲ್ಲಣ್ಣರ ಸಲಹೆಯಂತೆ ಹುನಗುಂದದ ಮಾಗಿಯ ಪ್ರಕಾಶ್ ಸ್ವಾಮಿಯವರ ಹೊಲ ಸಮತಟ್ಟು ಮಾಡಿ ಕೆಲವು ವರ್ಷ ಸಂದಿದೆ. ಹತ್ತು – ಹನ್ನೆರಡು ಎಕ್ರೆಯ ಹೊಲ ಇವರದು. ಮೇಲ್ಭಾಗದಿಂದ ಧಾರಾಳ ನೀರು ಹರಿದು ಬರುತ್ತದೆ. ಒಂದಾಳು ಎತ್ತರದ ತಳ ಒಡ್ಡು, ಗುಂಡಾವರ್ತಿ ಮತ್ತು ಮೊದಲ ಹಂತದ 'ತೆಂಬ' ಕಡಿದು ಹಾಕುಮಣ್ಣಿನ 'ಎದಿ' ರಚಿಸಿದ್ದಕ್ಕೆ ಒಂದು ಲಕ್ಷ ರೂಪಾಯಿ ಖರ್ಚಾಗಿತ್ತು.

ಹಿಂದೆ 'ಹರಿ'ಯಾಗಿದ್ದ ಜಾಗದಲ್ಲಿ ನಯವಾದ ಮಣ್ಣು ತುಂಬಿಕೊಂಡಿದೆ. ಅದನ್ನು ತೋರಿಸಿ ಮಲ್ಲಣ್ಣ ಕೇಳುತ್ತಾರೆ, 'ನಾವು ಖರ್ಚು ಮಾಡಿದ್ದು ಒಂದು ಲಕ್ಷ ರೂಪಾಯಿ. ದೇವರು ತಂದು ಹಾಕಿದ ಈ ರೇವೆಮಣ್ಣಿಗೆ ಎಷ್ಟು ಬೆಲೆ ಹಿಡಿಯುತ್ತೀರಿ?'



ತಮ್ಮ ಹೊಲದ ಗುಂಡಾವರ್ತಿಯ ಬಳಿ ಮಲ್ಲಣ್ಣ. ಹೊಲ ಹೇಗೆ ಸಮತಟ್ಟಾಗಿದೆ ಗಮನಿಸಿ



ಎರೆಮಣ್ಣು ಬೇಸಿಗೆಯಲ್ಲಿ ಬಿರುಕುಬಿಡುತ್ತದೆ. ಇದನ್ನು 'ಆಣ್ ಬರುವುದು' ಅಥವಾ 'ಎರಕಲು ಬಿಡಿ' ಎನ್ನುತ್ತಾರೆ. ಬಿರುಕುಗಳ ಮೂಲಕ ಮಳೆನೀರು ಇಳಿಯತೊಡಗಿ ಒಡ್ಡು ಒಡೆದುಹೋಗಲೂಬಹುದು. ಇದನ್ನು ತಪ್ಪಿಸಲು ಒಡ್ಡಿನ ಮೇಲ್ಭಾಗಕ್ಕೆ ಗರಸು ಮಣ್ಣು ಹಾಕಬೇಕು.

### ಗರಸು ಏಕೆ, ಎಲ್ಲಿಂದ?

ಕಪ್ಪುಮಣ್ಣು ತುಂಬಾ ಸವೆದಲ್ಲಿ ಮೇಲ್‌ಸ್ತರದಲ್ಲೇ ಗರಸು ಸಿಗುತ್ತದೆ. ಸಿಕ್ಕಸಿಕ್ಕಲ್ಲಿಂದ ಗರಸು ತೋಡುವುದು ಸರಿಯಲ್ಲ. ಹೊಲದ 'ಒಡಲು' ಭಾಗದಿಂದಂತೂ ತೆಗೆಯಲೇ ಬಾರದು. ಸ್ವಲ್ಪ ಏರುಭಾಗದಿಂದ ತೆಗೆದರೆ ಅದನ್ನೊಂದು ಕೃಷಿಹೊಂಡವಾಗಿಸಬಹುದು. ಆಗ ಕೆಳಗಿನ ಹೊಲಕ್ಕೆ ತೇವಾಂಶವೂ ಸಿಗುತ್ತದೆ.

ಗರಸು ಎರಡರಿಂದ ಐದು ಮೊಳ ಆಳದಲ್ಲಿ ಸಿಕ್ಕರೆ ಅನುಕೂಲ. ಇನ್ನೂ ಆಳಕ್ಕೆ ಹೋದರೆ ವೆಚ್ಚ ಜಾಸ್ತಿ. ಧಾರಾಳ ಗರಸು ಸಿಗದಿದ್ದರೆ ಕಪ್ಪು ಮಣ್ಣಿನ ಒಡ್ಡಿನ ಕೆಳಮೈಗೆ ಉದ್ದಕ್ಕೆ ಗರಸಿನ ಗಟ್ಟಿ ಪದರ ಕೊಟ್ಟರೂ ನಡೆಯುತ್ತದೆ. ಒಡ್ಡಿನ 'ಕುಂಬಿ'(ಶಿಖರ ಭಾಗ)ಯ ಮೇಲೆ ಉಸುಕಿನ ಪದರ ಹಾಕಿದರೂ ಹಾನಿ ತಪ್ಪುತ್ತದೆ.

ಸಾಮಾನ್ಯವಾಗಿ ಜಲಾನಯನ ಇಲಾಖೆಯ ಒಡ್ಡುಗಳಲ್ಲಿ ಈ ಎಚ್ಚರ ಪಾಲಿಸುವುದಿಲ್ಲ. ಅವರು ಎರೆಮಣ್ಣು ಬಳಸಿ ಒಡ್ಡು ಹಾಕಿ ಹೋಗುತ್ತಾರೆ. ಎರಡು– ಮೂರು ವರ್ಷಗಳಲ್ಲಿವು ಒಡೆದುಹೋಗುತ್ತವೆ.

'ಆಯಾ ರೈತರೇ ಹೊರಮೈಗೆ ಗರಸು ಅಥವಾ ಮೇಲ್ಬದಿಗೆ ಉಸುಕಿನ ಪದರ ಹಾಕಿಕೊಂಡರೆ ಒಡ್ಡು ಒಡೆಯದಂತೆ ಕಾಪಾಡಬಹುದು,' ಸಲಹೆ ಕೊಡುತ್ತಾರೆ ಮಲ್ಲಣ್ಣ.

ಒಡ್ಡಿನ 'ಕುಂಬಿ'ಗೆ ತುಂಬ ಮಹತ್ವವಿದೆ. ಮನೆಯ ಛಾವಣಿಯನ್ನು ಆಧರಿಸುವ ಅಡ್ಡದಂತೆಯೇ ಇದು ಬಲು ಮುಖ್ಯ. ಐದ್ಹತ್ತು ವರ್ಷಗಳಿಗೊಮ್ಮೆ ಕುಂಬಿಯನ್ನು ಏರಿಸಬೇಕು. ಕುಂಬಿ ಮತ್ತು ಹೊಲದ ಅತಿ ಎತ್ತರದ ತೆಂಬ – ಎರಡನ್ನೂ ಡಂಪಿ ಲೆವೆಲ್ ಹಿಡಿದು ನೋಡಿ ಒಂದೇ ಮಟ್ಟದಲ್ಲಿರಿಸಬೇಕು.



ಒಡ್ಡಿನ ಮೇಲೆ ಹೀಗೆ ಗರಸು ಮಣ್ಣು ಹಾಕಿದರೆ ಅದು ಸುರಕ್ಷಿತವಾಗಿ ಉಳಿಯುತ್ತದೆ

## ಒಡ್ಡು ನಿರ್ಮಿಸುವವರಿಗೆ. . .

- ಗರಸು ಮಣ್ಣು ಒಡ್ಡಿಗೆ ಸೂಕ್ತ. ಅದು ಎರಿ ಮಣ್ಣಿನಂತೆ 'ಆಣ್ ಬರುವುದಿಲ್ಲ'; ಸವೆಯುವುದಿಲ್ಲ.
- ಗರಸು ಮಣ್ಣು ಸಿಗದಲ್ಲಿ ಎರಿಮಣ್ಣಿನ ಕುಂಬಿಗೆ ಹೊರಬದಿಯಿಂದ ಗರಸು ಮಣ್ಣಿನ ಪದರ ಹಾಕಿಕೊಡಿ.
- ಗರಸು, ಕೆಮ್ಮಣ್ಣು ಎರಡೂ ದೊಡ್ಡ ಪ್ರಮಾಣದಲ್ಲಿ ಸಿಗದಲ್ಲಿ ಎರಿ ಮಣ್ಣಿನ ಒಡ್ಡಿನ ಹೊರಮೈಯಲ್ಲಿ ಸ್ವಲ್ಪ ತಳಪಾಯ ತೆಗೆದು ಗರಸು/ ಕೆಮ್ಮಣ್ಣು ತುಂಬಿಕೊಟ್ಟು ಮೇಲೆ ಕಪ್ಪರಿಕನ ಗಡ್ಡೆಯಂತಹ ಹುಲ್ಲುಗಡ್ಡೆ ಬೆಳೆಸಿ.
- ಹೊಲದಲ್ಲಿ 2–3 ಮೊಳದಾಳದಲ್ಲಿ ಗರಸು ಸಿಕ್ಕರೆ ತೆಗೆಯುವುದು ಮಿತವ್ಯಯಕಾರಿ. ನಾಲ್ಕು ಮೊಳ ಆಳವಾದರೂ ಪರವಾಗಿಲ್ಲ. ಹೊಲದಿಂದಲೇ ಗರಸು ತೆಗೆದರೆ ಒಂದು ಕೃಷಿಹೊಂಡ ಸಿಕ್ಕಂತಾಗುತ್ತದೆ.
- ಗುಂಡಾವರ್ತಿಯ ಮಟ್ಟ ಇಮಾರತಿಯ(ಒಡ್ಡು) ಮಟ್ಟಕ್ಕಿಂತ ಕೆಳಗಿರಬೇಕು. ಇಲ್ಲದಿದ್ದರೆ ಇಮಾರತಿಯ ಎತ್ತರಕ್ಕೂ ನೀರು ನಿಂತು ಅದು ಒಡೆದುಹೋಗಬಹುದು.



## ಒಡ್ಡಿನ ರಕ್ಷಣೆಗೆ ಎದಿ, ಗಟಾರ

ಒಡ್ಡಿಗೆ ಹರಿದಿಳಿಯುವ ನೀರಿನ ಒತ್ತಡದಿಂದ ಅಪಾಯ ತಪ್ಪಿಸಲು ಉಪಾಯವಿದೆ. ನೀರು ನಿಧಾನವಾಗಿ ಕುಂಬಿಯ ಕಡೆ ಸಾಗುವಂತಾಗಬೇಕು. ಒಡ್ಡಿನ ಮೇಲಂಚಿನಲ್ಲಿ 'ಎದಿ' ಹಾಕುವುದು ಇದಕ್ಕೆ.

ಎದಿಗೆ ಬಳಸುವುದು ಹಾಕುಮಣ್ಣು. ಅಂದರೆ ಇನ್ನೊಂದೆಡೆಯಿಂದ ಕಿತ್ತು ತೆಗೆದ ಸಡಿಲ ಮಣ್ಣು. ಎರೆಮಣ್ಣು ಸಾಕು. ಎದಿ ತೀರಾ ಕಡಿಮೆ ಇಳಿಜಾರಿನದ್ದಾಗಿರಬೇಕು. ಅದರ ಮೇಲೆ ಸಲೀಸಾಗಿ ಕೂರಿಗೆ ಒಯ್ದು ಒತ್ತಲು ಸಾಧ್ಯವಾಗಬೇಕು.



ಎದಿ ಹಾಕಲು ಮಣ್ಣು ಎಲ್ಲಿಂದ ತರಬೇಕು? ಇದರಲ್ಲೂ ದೂರದೃಷ್ಟಿ ಬೇಕು. ಕೆಲಸ ಸುಲಭವಾಗಲೆಂದು ಕೆಲವರು ಹತ್ತಿರದಿಂದಲೇ ಮಣ್ಣು ತೋಡಿ ಬಳಸುತ್ತಾರೆ. ಇದು ಒಳ್ಳೆಯದಲ್ಲ.

ಬದಲಿಗೆ, ಒಡ್ಡಿನ ಹತ್ತು ಮಾರು ಒಳಗಡೆ ಸಮಾಂತರವಾಗಿ 'ಪಾರ'ದ (ಇನ್ನೊಂದು ತುದಿಯ ಗಡಿ) ವರೆಗೆ ಗಟಾರ ತೋಡಬೇಕು. ಈ ಮಣ್ಣನ್ನು ಒಡ್ಡಿನುದ್ದಕ್ಕೂ ಎದಿಗೆ ಬಳಸಬಹುದು. 'ಗಟಾರ' ಅಂದರೆ – ಉದ್ದನೆಯ, ಅಗಲದ ಅಗಳು. ಗಟಾರವನ್ನು ಸವನ ನೆಲ (ಸವ್ವ ಹೊಲ, ಸಮಪಾತಳಿ ಹೊಲ) ಇರುವಲ್ಲೇ ಕಡಿಸಬೇಕು. ತೆಂಬ ಇದ್ದಲ್ಲಲ್ಲ.

ಒಡ್ಡಿನ ಪಕ್ಕದಲ್ಲೇ ಗಟಾರ ತೋಡಬೇಡಿ. ಅಪಾಯವಿದೆ. ಅತಿ ಸನಿಹ ತಗ್ಗು ಇದ್ದರೆ ನೀರು ನಿಂತು ಒಡ್ಡಿನ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ.

ಹತ್ತು ಮಾರು ದೂರ ಗಟಾರ ತೋಡುವುದರಿಂದ ಇನ್ನೊಂದು ಗುಣವಿದೆ. ಅದು ಮೇಲಿನಿಂದ ಹರಿದು ಬರುವ ನೀರಿನ ದಿಕ್ಕು ಬದಲಿಸುತ್ತದೆ. ಅದರ ಒತ್ತಡ ಒಡ್ಡಿನ ಮೇಲೆ ನೇರವಾಗಿ ಬೀಳುವುದಿಲ್ಲ.

ರಭಸದಲ್ಲಿ ಇಳಿಯುವ ನೀರನ್ನು ಒಡ್ಡು ತಡೆಯುವುದು ಸರಿ. ಆದರೆ ನೀರಿಗೆ ಹರಿಯಲು ದಾರಿ ಬೇಡವೇ? ಗಟಾರವನ್ನು ಹೊಲದ ಪಾರದ ವರೆಗೂ ತೋಡುವುದು ಇದಕ್ಕಾಗಿ. ಹೀಗೆ ನೀರಿನ ದಿಕ್ಕು ತಿರುಗಿಸಿ ಬಿಡುವುದು ಒಡ್ಡಿನ ಸುರಕ್ಷತೆಗಾಗಿ.

'ಕೆಲವರು ಈ ವಿಚಾರದಲ್ಲಿ ತಪ್ಪು ಮಾಡಿಕೊಂಡು ಆಮೇಲೆ –ಎಷ್ಟು ಮಜಬೂತಾದ ಒಡ್ಡು ಹಾಕಿದರೂ ನಿಲ್ಲುತ್ತಿಲ್ಲ– ಅಂತ ದೂರುತ್ತಾರೆ' ಮಲ್ಲಣ್ಣ ನೆನಪಿಸಿಕೊಳ್ಳುತ್ತಾರೆ.

ಮಲ್ಲಣ್ಣನ 'ಎರೆಮಣ್ಣಿಗೆ ನೀರುಣಿಸದೆ ಇರಬೇಡ, ನೀರು ನಿಲ್ಲಿಸಬೇಡ' ಎಂಬ ಕಿವಿಮಾತು ನಿಮ್ಮಲ್ಲಿ ಫಕ್ಕನೆ ಗೊಂದಲ ಹುಟ್ಟಿಸಬಹುದು. 'ಎಷ್ಟು ಬೇಕೋ ಅಷ್ಟು ನೀರನ್ನು ಕೊಡದೆ ಇರಬೇಡಿ. ಹಾಗೆಂದು ಚಲೋ ಮಳೆ ಬಂದ ವರ್ಷಗಳಲ್ಲಿ, ನೀರನ್ನೆಲ್ಲಾ ಉಳಿಸಿಕೊಂಡರೆ ಅನನುಕೂಲಕರ' ಎನ್ನುವುದು ಇದರ ಅರ್ಥ.



**ಒಂದು ಕಲ್ಲಿನ ನಿಯಂತ್ರಣ!**

ಈ ಎರಡೂ ಉದ್ದೇಶಗಳನ್ನು ಈಡೇರಿಸಲು ಒಡ್ಡಿನ ನಡುವೆ ಒಳಗಟ್ಟಿ ಅಥವಾ ಗುಂಡಾವರ್ತಿ(waste weir) ಮಾಡಿಕೊಂಡಿರುತ್ತಾರೆ. ಎರಡರ ಮೂಲ ಉದ್ದೇಶ ಹೆಚ್ಚುವರಿ ನೀರನ್ನು ಹೊರಬಿಟ್ಟು, ಮೇಲ್ಮಣ್ಣನ್ನು ಅಲ್ಲಲ್ಲೇ ಠೇವಣಿ ಇಡುವುದು.

ಒಳಗಟ್ಟಿ ಅಥವಾ ಗುಂಡಾವರ್ತಿಗಳೆರಡೂ ಕಡಿಮೆ ಮಳೆ ಬಿದ್ದಾಗ ಬೇಕಾದಷ್ಟು ನೀರು ನಿಲ್ಲಿಸಿ ಮಿಕ್ಕಿದರೆ ಹೊರಬಿಡುವ ನಿಯಂತ್ರಣ ಕೇಂದ್ರಗಳು. ಇವುಗಳ ರಚನೆಯಲ್ಲಿ ವ್ಯತ್ಯಾಸ ಇದೆ. 'ಅತಿ ಕಡಿಮೆ ಮಳೆ ಬಿದ್ದಿದೆ, ಹಸಿಯಾಗಿದ್ದು ಸಾಲದು' ಎಂದಿಟ್ಟುಕೊಳ್ಳೋಣ. ಒಳಗಟ್ಟಿಯಲ್ಲೊಂದು ಸಾಲು ಕಲ್ಲು ಪೇರಿಸಿ ನೀರನ್ನು ತಡೆಯಬಹುದು. ಸಾಕೆನ್ನುವಾಗ ಹೊರಬಿಡಬಹುದು.

ಗುಂಡಾವರ್ತಿಯಲ್ಲಿ ಈ ಕೆಲಸ ಇನ್ನೂ ಸುಲಭ. ಬಾಯಿಯ ದ್ವಾರದಲ್ಲಿ ಒಂದು ಕಲ್ಲು ಇಟ್ಟರೆ ಸಾಕು. ಸಾಕೆಂದಾಗ ಕಲ್ಲು ತೆಗೆದರೆ, ಉಳಿದ ನೀರು




ಗುಂಡಾವರ್ತಿಯ ಬಳಿ ಒಂದೇ ಕಲ್ಲಿನಿಂದ ನೀರನ್ನು ನಿಯಂತ್ರಿಸುವ ರೀತಿ

ಹೊರಹರಿಯುತ್ತದೆ. ಗುಂಡಾವರ್ತಿಯಲ್ಲಿ ನಿಯಂತ್ರಣ ಸುಲಭ, ಕರಾರುವಾಕ್ಕು. ಆದರೆ ಅದರ ಖರ್ಚು ಹೆಚ್ಚು.

2001ರಿಂದ 2003ರ ವರೆಗೆ ಮಳೆ ಕಡಿಮೆ ತಾನೆ. ಆಗ ಗುಂಡಾವರ್ತಿಗಳ ದ್ವಾರಕ್ಕೆ ಒಂದು ಕಲ್ಲು ಅಡ್ಡ ಇಡುತ್ತಿದ್ದರು. ಸ್ವಾರಸ್ಯ ನೋಡಿ. ಒಂದು ಯಕಶ್ಚಿತ್ ಕಲ್ಲು ಇವರ ಆ ವರ್ಷದ ನೋವನ್ನು ನಲಿವಾಗಿಸುತ್ತದೆ!

ಭದ್ರವಾದ ತಳಒಡ್ಡು ಹಾಕಿ, ಒಳಗಟ್ಟಿ/ಗುಂಡಾವರ್ತಿ ಕಟ್ಟಿ, ಗಟಾರ ತೋಡಿ ಎದಿ ಮಣ್ಣು ಹಾಕಿಕೊಟ್ಟರೆ ನೆಲಜಲ ಸಂರಕ್ಷಣೆಯ ಮೊದಲ ಹಂತ ಆದಂತೆಯೇ. ಕೆಲಸಗಳು ಸಮರ್ಪಕವಾದರೆ ಪ್ರಕೃತಿಯೇ ನಿಧಾನವಾಗಿ ಈ ಹೊಲವನ್ನು ಸಮತಟ್ಟು ಮಾಡುತ್ತದೆ. ಮೇಲ್ಭಾಗದಿಂದ ಬಂದ ಕೆನೆಮಣ್ಣು ತಗ್ಗು ಭಾಗಗಳಲ್ಲಿ ಸೇರಿಕೊಳ್ಳುತ್ತದೆ.

ಹೊಲ ದೊಡ್ಡದಾಗಿದ್ದು ಇಳಿಜಾರು ಸುಮಾರು ಆರಡಿಗಿಂತ ದೂರದಲ್ಲಿದೆ ಎಂದಿಟ್ಟುಕೊಳ್ಳಿ. ಆಗ 'ತೆಂಬ'ದ ಮಣ್ಣು ಅಗೆದು ತಂದು ತಗ್ಗಿಗೆ ತುಂಬುವುದು ವೆಚ್ಚದಾಯಕ. ಇಂಥಲ್ಲಿ ಹೊಲದ ನಡುವೆ ಇನ್ನೊಂದು ಬದು ಹಾಕಿ ಎರಡು ತುಂಡು(plot) ಗಳಾಗಿಸುವುದು ಸೂಕ್ತ.





## 'ಹೊಲ ತಿದ್ದುವ' ಹೆಜ್ಜೆಗಳು

ಹೊಲ ತಿದ್ದುವ ಕೆಲಸಕ್ಕೆ ಲಕ್ಷಗಟ್ಟಲೆ ರೂಪಾಯಿ ಬೇಕು. ರೈತರಿಗೆ ಒಮ್ಮೆಲೇ ಮಾಡಿಸಿಕೊಳ್ಳಲು ಆಗುವುದಿಲ್ಲ. ಕನಿಷ್ಠ ಒಂದು ತಳ ಒಡ್ಡು, ಒಳಗಟ್ಟಿ ರಚಿಸಿ ಎದಿ ಹಾಕಿಬಿಡುವುದು ಬರನಿರೋಧಕತೆಯ ಮೊದಲ ಹೆಜ್ಜೆ.

ಸಾಮಾನ್ಯವಾಗಿ ಸುಗ್ಗಿ ಕೊಯ್ಲು ಆದ ಕೂಡಲೇ(ಫೆಬ್ರವರಿ–ಮಾರ್ಚ್) ಒಡ್ಡಿನ ಕೆಲಸ ಚಾಲೂ ಆಗುತ್ತದೆ. ಮಳೆ ಬಾರದಿದ್ದರೆ ಜೂನ್, ಆಗಸ್ಟ್ ತನಕವೂ ಮುಂದುವರಿಸಬಹುದು.

ಹಿಂದೆಲ್ಲಾ ತೆಂಬ ಕಡಿಯುವುದು, ಎದಿ ಮಣ್ಣಿಗಾಗಿ ಗಟಾರ ತೋಡುವುದು, ಒಡ್ಡಿಗಾಗಿ ಮಣ್ಣು ಹೆಚ್ಚು ತರುವುದು– ಹೀಗೆ ಎಲ್ಲ ಕೆಲಸವು ಆಳುಗಳಿಂದಲೇ ನಡೆಯಬೇಕಿತ್ತು. ತಿಂಗಳುಗಟ್ಟಲೆ ಕೆಲಸ. ಈಗ ಜೇಸೀಬಿಗಳಿಂದಾಗಿ ಕಾಮಗಾರಿ ಬಹುಬೇಗ ನಡೆಯುತ್ತದೆ. ಎಲ್ಲಾ ಸರಿ, ಹೊಲ ತಿದ್ದಿದ ಮಾತ್ರಕ್ಕೇ ಬೆಳೆ ಹೆಚ್ಚಾಗುವುದು ಹೇಗೆ?

ತಳ ಒಡ್ಡು ಕಟ್ಟುವಾಗ ಒಳಗಟ್ಟಿ, ತೆಂಬ ತೋಡಿ ಎದಿ ಹಾಕುವ ಕೆಲಸ ಅನಿವಾರ್ಯ. ಮೇಲಿನಿಂದ ಬರುವ ಫಲವತ್ತಾದ ಕೆನೆಮಣ್ಣು ಹೊಲದಲ್ಲೇ ಉಳಿಯುತ್ತದೆ. ಒಡ್ಡಿನ, ಎದಿಯ ಎದುರು ಭಾಗದ ಒಂದಷ್ಟು ವಿಶಾಲ ಜಾಗ ಅಂಗಳ(ಸಮನೆಲ)ವಾಗುತ್ತದೆ. ಕಡಿಮೆ ಮಳೆಗೂ ಹೆಚ್ಚು ಜಾಗ ಹಸಿಯಾಗುತ್ತದೆ. ಫಸಲು, ಫಲವತ್ತತೆ ಜಾಸ್ತಿಯಾಗುತ್ತದೆ.

ನಾಲ್ಕೂ ಮೂಲೆಗಳಿಗೆ ಒಂದೇ ಸಮನಾಗಿ ನೀರು ಹರಿಯುವಂತಾದರೆ, ಹೊಲ ತಿದ್ದುವ ಕೆಲಸ ಕಾರ್ಯಕ್ಷಮವಾಗಿ ಆಗಿದೆ ಎನ್ನಬಹುದು. 'ಕೆರೆಯಂತೆ ಹೊಲ' ಎನ್ನುವುದು ಇದನ್ನು.

## ಬರ ಬಂದೈತಿ ಯಾರಿಗೆ ಅಂದ್ರೆ . .

ಎಪ್ಪತ್ತೇಳು ವಯಸ್ಸಿನ ಹನುಮಪ್ಪ ಚಂದಪ್ಪ ಮುಕ್ಕಣ್ಣವರ್ ಮಾತು ಕೇಳಿ – 'ಬರ ಬಂದೈತಿ ಯಾರಿಗೆ ಅಂದ್ರೆ ಒಡ್ಡು ಹಾಕಿಸದೆ ಇದ್ದ ರೈತರಿಗಷ್ಟೇ ನೋಡ್ರಿ. ಒಡ್ಡು ಇತ್ತು ಅಂದ್ರೆ ಹರಿಗುಂಟ ನಾಕು ಮಾರು ಜಾಗದಲ್ಲಾದರೂ ಮಳೆನೀರು

ನಿಂತು ಹಸಿಯಾಗುತ್ತೆ. ನಾಲ್ಕು ಚೀಲ ಜೋಳ ಬೆಳೀತೈತೆ. ಭೂಮಿ ಹುಸಿ ಹೋಗೋಲ್ಲ ನೋಡ್ರಿ. ಹೊಟ್ಟೆ ತುಂಬ್ಸೋದಕ್ಕೆ ಅಡ್ಡಿ ಇಲ್ಲ.'

ನಾಲ್ಕು ದಶಕಗಳ ಹಿಂದೆ ಕೂಲಿಯಾಗಿದ್ದ ಹನುಮಪ್ಪ ಈಗ ರೈತ. ಬದುಕಿನಲ್ಲಿ ನೆಮ್ಮದಿ. ಈ ಬದಲಾವಣೆಯಲ್ಲಿ ಶಂಕ್ರಣ್ಣ ನಾಗರಾಳರ ದಯೆ, ಒಡ್ಡುಗಳ ಕೊಡುಗೆ ಎರಡೂ ಇದೆ. ಜಿಲ್ಲೆಯ ರೈತರಿಗೆ ಬರವನ್ನು ನಗುನಗುತ್ತಾ ಎದುರಿಸಿ ಬದುಕಲು ಬೇಕಾದ ಪಾಠವೂ ಇದೆ.

ಹನುಮಪ್ಪನ ಹೊಲಕ್ಕೀಗ ಅವರ ದೊಡ್ಡ ಮಗ ನಿಂಬಣ್ಣನಷ್ಟೇ(40) ವಯಸ್ಸು. ಶಂಕರಣ್ಣ ನಾಗರಾಳರ ಜತೆ 'ಒಡ್ಡು ಕಡಿಯಲು' ಹೋಗುತ್ತಿದ್ದಾಗ ಅವರೇ ಜಮೀನು ಕೊಳ್ಳುವಂತೆ ಪ್ರೇರೇಪಿಸಿದರು. 'ಬೆಳೆ ಬಂದಾಗ ಹಿಂದಿರುಗಿಸು' ಅನ್ನುತ್ತಾ ಹಣವನ್ನೂ ಕೊಟ್ಟರು. 'ಹೊಲ ತಿದ್ದಿಕೋ' ಅಂತ ಆಳುಗಳನ್ನು ಕಳಿಸಿಕೊಟ್ಟರು.



'ಒಳಗಟ್ಟಿ ಅನ್ನೋದು ಇದಕ್ಕೆ'



ಹಾಗೆ ತಿದ್ದಿಕೊಂಡ ಜಮೀನು ನಾಲ್ಕು ದಶಕಗಳಲ್ಲಿ ಒಮ್ಮೆಯೂ 'ಇಲ್ಲ' ಅನ್ನಲಿಲ್ಲ. ಸುತ್ತಲಿನ ಊರು, ಜಿಲ್ಲೆಗಳಲ್ಲಿ ಬರದ ಬಿಸಿ ತೀವ್ರವಾದಾಗಲೂ ಹನುಮಪ್ಪ ಕುಟುಂಬ ಹಸಿದುಳಿಯಲಿಲ್ಲ.

ಹನುಮಪ್ಪರ ಪ್ರಶ್ನೆ ಕೇಳಿ. 'ಯಾರೋ ನನ್ನೊಡನೆ ಬರ ಪರಿಹಾರಕ್ಕೆ ಅರ್ಜಿ ಹಾಕಲು ಒತ್ತಾಯಿಸಿದರು. ಹೊಟ್ಟೆಗೆ ಬೇಕಾದಷ್ಟು ಬೆಳೆ ಬೆಳೆದ ನಾನು 'ಬರ ಬಂದಿತ್ತು' ಅಂತ ಹೇಂಗೆ ಹೇಳ್ಲಿ? ಯಾವ ಮುಖ ಹೊತ್ತು ಪರಿಹಾರ ಕೇಳ್ಲಿ?'

ಅವರ ಇನ್ನೊಂದು ವಿವರಣೆ ಕೇಳಿ : 'ಈ ಒಡ್ಡು, ಎದಿ, ಒಳಗಟ್ಟಿ ಎಲ್ಲಾ ಸೇರಿ ಮಾಡೋದು ಬೇರೇನೂ ಇಲ್ಲ. ಮಳೆನೀರು ಅದರ ಪಾಡಿಗೆ ಓಡಬಾರದು. ಏನಿದ್ರೂ ನಮ್ ಪರ್ಮಿಸನ್ ತೆಗೆದುಕೊಂಡೇ ಹೋಗಬೇಕು.'

ಬಾದವಾಡಗಿ, ಚಿತ್ತರಗಿ, ರಾಮವಾಡಗಿ, ಕರಡಿ, ಕೋಡಿಹಾಳ, ಇಸ್ಲಾಂಪುರ, ವಂದವಾಡಗಿ ತುಂಬ, ಕೆಸರುಬಾವಿಗಳ ಸಿಂಹಪಾಲು ರೈತರದೂ ಹೀಗೆಯೇ – ಯಶೋಗಾಥೆಗಳೇ. ಜಿಲ್ಲೆಯನ್ನೇ ಕಂಗೆಡಿಸಿದ ಬರವನ್ನು ಈ ಮಂದಿ ಸದ್ದಿಲ್ಲದೆ ಗೆದ್ದಿದ್ದರು. ಅದು ಅದೃಷ್ಟದಿಂದಲ್ಲ – ಸತತ ಪರಿಶ್ರಮದಿಂದ. ಮುಂದಾಲೋಚನೆಯಿಂದ.

## ಕೂರಿಗೆ ಹೊಲದಲ್ಲಿ ನಾಲ್ಕು ಪಾಲು

ರೈತರು ತಮ್ಮ ಆದಾಯವನ್ನು ಹೇಗೆ ಸುಸ್ಥಿರವಾಗಿ ವೆಚ್ಚ ಮಾಡಬಹುದು?

ಇದಕ್ಕಾಗಿ ಸಂಗನಬಸಪ್ಪರ ಒಂದು ಸೂತ್ರ ಗಮನಿಸಿ. ಒಂದು ಕೂರಿಗೆ(ನಾಲ್ಕು ಎಕ್ರೆ) ಹೊಲ ಇದ್ದವ ಒಂದೆಕರೆಯ ಆದಾಯವನ್ನು ಮನೆ ವೆಚ್ಚಕ್ಕೆ, ಎರಡನೆಯದನ್ನು ಆಳುಗಳ ಖರ್ಚು ಮತ್ತು ಭೂಮಿ ಸುಧಾರಣೆಗೆ, ಮೂರನೆಯದನ್ನು ದಾನಧರ್ಮ, ಗುಡಿ–ಕೆರೆ–ಬಾವಿ ನಿರ್ಮಾಣಕ್ಕೆ ಹಾಗೂ ನಾಲ್ಕನೆಯದನ್ನ ಆಪದ್ಧನವಾಗಿ ಉಪಯೋಗಿಸಬೇಕು.

## ಒಂಟೆ ಡುಬರಿಯಂತ ಹೊಲ




ಹೊಲವನ್ನು ದೇಗುಲ ಎಂದೇ ನಂಬಿದ ನಾಗರಾಳ್ ಹೊಲಕ್ಕೆ ಬಾಗಿ ಭೂಮಿತಾಯಿಗೆ ನಮಸ್ಕರಿಸದೆ ವಿನಃ ಹೊಲಕ್ಕಿಳಿಯುವವರಲ್ಲ. 'ಏನು ಮಾಡೋದು ಹೇಳಿ? ಒಂಟೆ ಡುಬರಿಯಂತ ಹೊಲದಾಗ ಹುಟ್ಟೀವ್ರೀ. ಹಿಂಗಾಗಿ ನಾವು ಉಳೀಬೇಕಾದರೆ ನೆಲಜಲ ಸಂರಕ್ಷಣೆ ಮಾಡಲೇ ಬೇಕು. ಹಂಗೆ ಮಾಡಿದವರ್ನ ಭೂಮಿತಾಯಿ ಒಮ್ಮೆಯೂ ಕೈ ಬಿಟ್ಟಿಲ್ಲ ನೋಡ್ರಿ.'

ಒಡ್ಡು ಮತ್ತು ಅನುಬಂಧ ರಚನೆಗಳಿಂದ 'ಎಂಥಾ ರಭಸದಿಂದ ಬಂದ ನೀರೂ ನಡೆಯುವಂತೆ ಆಗ್ತದೆ. ನಡೆಯುವ ನೀರು ನಿಲ್ಲುತ್ತದೆ. ನಿಂತ ನೀರು ಉಣ್ಣುವಂತೆ ಆಗ್ತದ. ಉಂಡು ಹೆಚ್ಚಾದ ನೀರನ್ನು ಮಾತ್ರ ಮೋರಿಯ ಮುಖಾಂತರ ಹೊರಬಿಡಬೇಕಾಗುತ್ತದೆ. ಇಲ್ಲಾಂದ್ರೆ ನೀರು ನಿಂತು ಹೊಲ ಕೆಡ್ತದೆ.'

ಒಂಭತ್ತು ಆವೃತ್ತಿ ಕಂಡ 'ಕೃಷಿಜ್ಞಾನ ಪ್ರದೀಪಿಕೆ' ನಲವತ್ತು ಸಾವಿರಕ್ಕೂ ಹೆಚ್ಚು ಪ್ರತಿ ಮಾರಾಟಗೊಂಡಿದೆ. ಇಂಗ್ಲಿಷಿಗೂ ತರ್ಜುಮೆಯಾಗಿದೆ. ಈ ಕೈಪಿಡಿಯಲ್ಲಿ ನೆಲಜಲ ಸಂರಕ್ಷಣೆ ಬಗ್ಗೆ ಒಟ್ಟು ಹತ್ತು ಪುಟಗಳ ವಿವರ ಮಾತ್ರ ಇದೆ. ಇವೆಲ್ಲವೂ ಘನಮಠ ಶಿವಯೋಗಿಯವರ ಸ್ವಾನುಭವ ಅಥವಾ ಸ್ವಾನುಭವಿಗಳಿಂದ ಪಡೆದ ಅಪೂರ್ವ ಮಾಹಿತಿ.

'ಮುತ್ತಯ್ಯ ಮತ್ತು ಅಪ್ಪಾವ್ರು ಸೇರಿ ಹೆಚ್ಚುಕಮ್ಮಿ 80 ವರ್ಷಗಳ ಕಾಲ ಜೀವನವನ್ನೇ ನೆಲಜಲ ಸಂರಕ್ಷಣೆ ಹಬ್ಬಿಸಲು ತೇಯ್ದರು ನೋಡಿ' ಮಲ್ಲಣ್ಣರ ತಾಯಿ ಶಿವಬಸಮ್ಮ ಹೇಳುತ್ತಿದ್ದರು, 'ನಮ್ ಹಿರೇಪ್ರಿಗೆ(ಯಜಮಾನರು) ಒಂದು ದಿನಾನೂ ಸವುಡು(ಬಿಡುವು) ಇದ್ದಿಲ್ಲ. ದಿನಾಲೂ ಒಬ್ಬಲ್ಲದಿದ್ರೆ ಇನ್ನೊಬ್ರು ಬಂದು ಮನೆ ಎದುರು ಕೂರೋರು – ನಂ ಹೊಲ ತಿದ್ದಿಸಿ ಕೊಡಿ– ಅಂತ.'





ರಾಮವಾಡಗಿಯ ಪ್ರಯೋಗಭೂಮಿ. ಹೊಲ 'ಕೆರೆಯ ಹಾಗೆ' ಇರುವುದನ್ನು ಗಮನಿಸಿ

ಈ ಮಾತನ್ನು ಹುನಗುಂದದ ನೂರಾರು, ಸಾವಿರಾರು ರೈತರು ಒಪ್ಪಿಕೊಳ್ಳುತ್ತಾರೆ.

**ಅನುಭವಗಳು**

ಮಲ್ಲಣ್ಣ ಅವರ ಈ ವರೆಗಿನ ಅನುಭವದಲ್ಲಿ ಅತ್ಯಂತ ಸವಾಲುದಾಯಕ ಅನಿಸಿದ್ದು ಹುನಗುಂದ ತಾಲೂಕು ಬನಹಟ್ಟಿಯ ಸಾರಂಗಿಮಠ್ ಅವರ ಹೊಲ ಮತ್ತು ಬಿಜಾಪುರ ಜಿಲ್ಲೆ ಬಸವನಬಾಗೆವಾಡಿಯ ಪಟ್ಟಣಶೆಟ್ಟರದು.

ಸಾರಂಗಿಮಠ್ ಅವರ ಹೊಲಕ್ಕೆ ನಾನೂರು ಎಕ್ರೆಯ ಮಳೆನೀರು ಹರಿದುಬರುತ್ತದೆ. ಪಟ್ಟಣಶೆಟ್ಟಿಯವರದಕ್ಕೆ ನೂರು ಎಕ್ರೆಯದು. ಆದರೆ ಈ ನೀರು ಹತ್ತಿರದ ಕಡಿದಾದ ಗುಡ್ಡದಿಂದ ತುಂಬಾ ರಭಸದಿಂದ ಇಳಿಯುತ್ತದೆ.

ಹುನಗುಂದ ತಾಲೂಕಿನ ಹಿರೇ ಓತಗೇರಿಯ ನಿವೃತ್ತ ಡಿಎಸ್ಪಿ ಎಲ್.ಆರ್. ಮಾಲಿ ಪಾಟೀಲ್ ಮೂರು ವರ್ಷಗಳ ಹಿಂದೆ ಮಲ್ಲಣ್ಣನ ಮಾರ್ಗದರ್ಶನದಲ್ಲಿ ತನ್ನ 28 ಎಕ್ರೆ ಹೊಲ ತಿದ್ದಿಸ್ಕೊಂಡರು. ಒಟ್ಟು 2.5 ಲಕ್ಷ ವೆಚ್ಚ ಆಯಿತು. ಇವರು ತಳ ಒಡ್ಡು ಮತ್ತು ಒಳಗಟ್ಟೆ ಮಾತ್ರ ಮಾಡಿಸಿದ್ದಾರೆ. ಮೇಲ್ಭಾಗದಿಂದಿಳಿಯುವ ಮಳೆನೀರು ನಮ್ಮ ಹೊಲವನ್ನು ಸಮತಟ್ಟಾಗಿಸಲು ಎರಡು ವರ್ಷ ಬೇಕು. ಆದರೂ ಇಷ್ಟರಲ್ಲೇ ಇವರಿಗೆ

**ಹರಿಯನ್ನು ತಡೆದರೆ . . .**

'ಸಾಲ ಮಾಡಿ ಮದುವೆ ಮಾಡಬೇಡ. ಆದ್ರೆ ಸಾಲ ಮಾಡಿ ಒಡ್ಡು ಹಾಕು' ಎನ್ನುವುದು ಶಂಕ್ರಣ್ಣನ ಸಲಹೆ.

ಹರಿಯುವ ನೀರಿಗೆ ಒಡ್ಡು ಹಾಕಿ ಹೊಲವನ್ನು ಕೆರೆಯಂತೆ ಮಾಡಿದವನಿಗೆ ಲಕ್ಷ್ಮಿ ಒಲಿಯುತ್ತಾಳೆ ಎಂದವರು ಹೇಳುತ್ತಲೇ ಬಂದಿದ್ದಾರೆ. ಈ ಮಾತಿಗೆ ಅವರ ವಿವರಣೆ ಹೀಗಿದೆ : 'ಹರಿಯನ್ನು ತಡೆದುಬಿಡ್ರಿ, ಹರಿ ಎಂದರೆ ಯಾರು? ಸಾಕ್ಷಾತ್ ವಿಷ್ಣು. ಹರಿಯನ್ನು ನೀವು ಹೊಲದಲ್ಲೇ ಕಟ್ಟಿ ಹಾಕಿ ಬಿಟ್ಟರೆ ಮತ್ತ ಅವನ ಹೆಂಡತಿ ಲಕ್ಷ್ಮಿ ಬೇರೆಲ್ಲಿಗೆ ಹೋದಾಳ. ಆಕೀನೂ ನಿಮ್ಮ ಹೊಲದಲ್ಲೇ ಉಳಿಯುತ್ತಾಳೆ.'

ಈ ಮಾತನ್ನು ಹುನಗುಂದದ ನೂರಾರು, ಸಾವಿರಾರು ರೈತರು ಒಪ್ಪಿಕೊಳ್ಳುತ್ತಾರೆ.



ಹೊಸದಾಗಿ ನಿರ್ಮಿಸಿದ ಗುಂಡಾವರ್ತಿಯ ಮೇಲೆ ಮಲ್ಲಣ್ಣ



**ಅನುಭವಗಳು**

ಮಲ್ಲಣ್ಣ ಅವರ ಈ ವರೆಗಿನ ಅನುಭವದಲ್ಲಿ ಅತ್ಯಂತ ಸವಾಲುದಾಯಕ ಅನಿಸಿದ್ದು ಹುನಗುಂದ ತಾಲೂಕು ಬನಹಟ್ಟಿಯ ಸಾರಂಗಿಮಠ್ ಅವರ ಹೊಲ ಮತ್ತು ಬಿಜಾಪುರ ಜಿಲ್ಲೆ ಬಸವನಬಾಗೆವಾಡಿಯ ಪಟ್ಟಣಶೆಟ್ಟರದು.

ಸಾರಂಗಿಮಠ್ ಅವರ ಹೊಲಕ್ಕೆ ನಾನೂರು ಎಕ್ರೆಯ ಮಳೆನೀರು ಹರಿದುಬರುತ್ತದೆ. ಪಟ್ಟಣಶೆಟ್ಟಿಯವರದಕ್ಕೆ ನೂರು ಎಕ್ರೆಯದು. ಆದರೆ ಈ ನೀರು ಹತ್ತಿರದ ಕಡಿದಾದ ಗುಡ್ಡದಿಂದ ತುಂಬಾ ರಭಸದಿಂದ ಇಳಿಯುತ್ತದೆ.

ಹುನಗುಂದ ತಾಲೂಕಿನ ಹಿರೇ ಓತಗೇರಿಯ ನಿವೃತ್ತ ಡಿಎಸ್ಪಿ ಎಲ್.ಆರ್. ಮಾಲಿ ಪಾಟೀಲ್ ಮೂರು ವರ್ಷಗಳ ಹಿಂದೆ ಮಲ್ಲಣ್ಣನ ಮಾರ್ಗದರ್ಶನದಲ್ಲಿ ತನ್ನ 28 ಎಕ್ರೆ ಹೊಲ ತಿದ್ದಿಸ್ಕೊಂಡರು. ಒಟ್ಟು 2.5 ಲಕ್ಷ ವೆಚ್ಚ ಆಯಿತು. ಇವರು ತಳ ಒಡ್ಡು ಮತ್ತು ಒಳಗಟ್ಟಿ ಮಾತ್ರ ಮಾಡಿಸಿದ್ದಾರೆ. ಮೇಲ್ಭಾಗದಿಂದಿಳಿಯುವ ಮಳೆನೀರು ನಮ್ಮ ಹೊಲವನ್ನು ಸಮತಟ್ಟಾಗಿಸಲು ಎರಡು ವರ್ಷ ಬೇಕು. ಆದರೂ ಇಷ್ಟರಲ್ಲೇ ಇವರಿಗೆ ಮೂವತ್ತರಿಂದ ಮೂವತ್ತೈದು ಶೇಕಡಾ ಬೆಳೆ ಜಾಸ್ತಿಯಾಗಿದೆ.



ಬಲಗಡೆಯ 'ತಿದ್ದಿದ ಹೊಲಕ್ಕೂ' ಎಡಗಡೆಯ ತಿದ್ದದೆ ಇರುವುದಕ್ಕೂ ವ್ಯತ್ಯಾಸ ಗಮನಿಸಿ

## ಫೂಲ್‌ಪ್ರೂಫ್ ಡ್ರಾಟ್‌ಪ್ರೂಫಿಂಗ್

ಕಂದಗಲ್ ಗ್ರಾಮದ ಗುರು ಗಾಣಿಗೇರ್ ಅವರಿಗೆ ಇರುವುದು ಕೇವಲ ನಾಲ್ಕೆಕ್ರೆ ಜಮೀನು. ಮೂರು ವರ್ಷ ಹಿಂದೆ ಎರಡೆಕ್ರೆಗೆ ಒಡ್ಡು ಹಾಕಿಸಲು ಅವರಿಗೆ ಮೂವತ್ತು ಸಾವಿರ ರೂ. ಖರ್ಚಾಯಿತು. 'ನಾನು ಹೂಡಿದ ಹಣ ಈಗಾಗಲೇ ಹಿಂದೆ ಬರತೊಡಗಿದೆ' ಗುರು ಹೇಳುತ್ತಾರೆ, 'ಮಲ್ಲಣ್ಣ ಜಾತಿ ಅಥವಾ ಸ್ಥಿತಿಗತಿ ನೋಡದೆ ಎಲ್ಲರಿಗೂ ಪುಕ್ಕಟೆ ಸೇವೆ ಕೊಡುತ್ತಿದ್ದಾರೆ. ಅವರು ನಿಜವಾಗಿಯೂ ದೊಡ್ಡ ಮನುಷ್ಯ.'

ಮಲ್ಲಣ್ಣನ ಮೂಗಿನ ನೇರಕ್ಕೆ ನಡೆಯುವ ಡ್ರಾಟ್‌ಪ್ರೂಫಿಂಗ್ ಕೆಲಸ ನೂರಕ್ಕೆ ನೂರು ಫೂಲ್‌ಪ್ರೂಫ್. ಮರಿಯಪ್ಪ ಹಂಡಿಯವರದು ಒಟ್ಟು ಹೊಲ ಹತ್ತೆಕ್ರೆ. ದಶಕದ ಹಿಂದೆ ಶಂಕ್ರಣ್ಣ ಭೂಮಿ ತಿದ್ದಿಸಿಕೊಟ್ಟರು. ಅನಂತರ ಬೆಳೆಗೆ ಕೊರತೆಯಿಲ್ಲ. ಕಳೆದ ಬರ ವರ್ಷಗಳಲ್ಲೂ 10 – 12 ಚೀಲ ಜೋಳ ಮನೆ ಸೇರಿದೆ.

ಇಳಕಲ್ಲಿನ ಮಹೇಶಪ್ಪ ಸಜ್ಜನರ(61) ಐವತ್ತೆಕ್ರೆಯಲ್ಲಿ ತಿದ್ದಿದ್ದು ಹದಿನೈದು ಎಕ್ರೆ ಮಾತ್ರ. ಬಹು ಹಿಂದೆ ಒಡ್ಡು ಹಾಕಿಸಿದ್ದರೂ ಸಮರ್ಪಕವಾಗಿರಲಿಲ್ಲ. ಪ್ರತಿವರ್ಷ ನಿರ್ವಹಣೆ ಬೇಡುತ್ತಿತ್ತು. ಹಾಗಿದ್ದರೂ 2004ರಲ್ಲಿ ಮಹೇಶಪ್ಪ ಊರೇ ಹುಬ್ಬೇರಿಸುವಂತಹ ಬೆಳೆ ಪಡೆದರು. ಹತ್ತೆಕ್ರೆಗೆ ನೂರಾಹತ್ತು ಚೀಲ ಜೋಳ!

## ಎಂಟು ಜಿಲ್ಲೆಗಳಿಗೆ ಪ್ರಸ್ತುತ

ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ನಾಗರಾಳ ಕುಟುಂಬದ ಬರನಿರೋಧಕ ಫಾರ್ಮುಲಾ ಹಬ್ಬತೊಡಗಿ ಹಲವು ದಶಕಗಳೇ ಆಗಿವೆ. ಈಗ ಅದು ರಾಯಚೂರು, ಗದಗ ಮತ್ತಿತರ ಜಿಲ್ಲೆಗಳಿಗೂ ವ್ಯಾಪಿಸುತ್ತಿದೆ.

'ನಾಗರಾಳರ ಬರನಿರೋಧಕ ಕ್ರಮಗಳು 80 ಶೇಕಡಾ ಎರೆಮಣ್ಣು ಹೊಂದಿದ ಬಾಗಲಕೋಟೆ, ಬಿಜಾಪುರ, ಗದಗ, ಕೊಪ್ಪಳ, ರಾಯಚೂರು ಜಿಲ್ಲೆಯ ಭಾಗ; ಬಳ್ಳಾರಿ ಜಿಲ್ಲೆಯ ಭಾಗ, ಧಾರವಾಡ ಜಿಲ್ಲೆಯ ಭಾಗ ಮತ್ತು ಚಿತ್ರದುರ್ಗ ಜಿಲ್ಲೆಯ ಭಾಗಗಳನ್ನು ಒಳಗೊಂಡ ಎಂಟು ಜಿಲ್ಲೆಗಳ ಉತ್ತರ ಒಣಪ್ರದೇಶಕ್ಕೆ (Northern dry Zone of Karnataka) ಸೂಕ್ತ' ಎನ್ನುತ್ತಾರೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಬಿಜಾಪುರ ಪ್ರಾದೇಶಿಕ ಸಂಶೋಧನಾ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಮುದಕಪ್ಪ ಬಿ. ಗುಳೇದ್.



ಗುಳೇದ್ ಅವರ ಪ್ರಕಾರ ಮಲ್ಲಣ್ಣ ಶಿಫಾರಸು ಮಾಡುವ, ಇವರು 'ಇಂಟರ್–ಪ್ಲಾಟ್ ರೈನ್ ಹಾರ್ವೆಸ್ಟಿಂಗ್' ಎಂದು ಕರೆಯುವ ಮೊದಲ ಘಟ್ಟದ ಕಾಮಗಾರಿ ನಡೆಸಲು ಒಂದು ಹೆಕ್ಟೇರಿಗೆ ಅಂದಾಜು 50,000 ರೂ. ಬೇಕಾದೀತು. ತಳ ಒಡ್ಡು ನಿರ್ಮಾಣ ಮತ್ತು ಒಳಗಟ್ಟಿ, ಎದಿ ಇತ್ಯಾದಿಗಳು ಈ ಮೊದಲ ಘಟ್ಟದಲ್ಲಿ ಬರುತ್ತವೆ. ಎರಡನೆ ಘಟ್ಟದಲ್ಲಿ ಬರುವ ತಟ್ಟುತಟ್ಟುಗಳಾಗಿ(plots) ವಿಂಗಡಣೆ ಮತ್ತು ಸಮತಟ್ಟು ಮಾಡಲು ಇನ್ನೂ ಹೆಚ್ಚಿನ ವೆಚ್ಚ ಬರಬಹುದು.

'ಈ ಭಾಗದ ಸಾಕಷ್ಟು ರೈತರು ಈ ಕ್ರಮಗಳನ್ನು ಅನುಸರಿಸಿದ್ದಾರೆ. ದೊಡ್ಡ ತೊಡಕು ಹಣದ್ದು. ಬ್ಯಾಂಕುಗಳು ಎಕ್ರೆಗೆ 25,000 ರೂ.ಗಳಂತೆ ಕಡಿಮೆ ಬಡ್ಡಿಯ ದೀರ್ಘಾವಧಿ ಸಾಲ ಕೊಡಲು ಮುಂದೆ ಬರಬೇಕು. ಹಾಗಾದರೆ ಬಡವರೂ



ಶಂಕ್ರಣ್ಣ ನಾಗರಾಳರ ಶಿಷ್ಯಂದಿರು. ಇವರೆಲ್ಲರೂ ಈಗ ಬರ ನಿರೋಧಕ ಕೆಲಸದ ಮೇಲುಸ್ತುವಾರಿಯಲ್ಲಿ ಬಿಜಿ



ರಾಮವಾಡಗಿಯ ಹೊಲದಲ್ಲಿ ಬೆಳೆದು ನಿಂತ ಸಜ್ಜೆ ಬೆಳೆಯ ಜತೆ ಮಲ್ಲಣ್ಣರ ಮಗ

ಇವನ್ನು ಮಾಡಿಕೊಳ್ಳಬಹುದು. ಮೂರ್ನಾಲ್ಕು ವರ್ಷಗಳಲ್ಲೇ ಸಾಲ ಹಿಂದಿರುಗಿಸಲು ಸಾಧ್ಯವಾಗಬಹುದು.'

**ಕಪ್ಪುಮಣ್ಣಿನ ಕೊರತೆ**

'ಈ ಕಪ್ಪು ಮಣ್ಣಿನಲ್ಲಿ ಸಾವಯವ ಅಂಶ ಕಡಿಮೆ. ಸೂಕ್ಷ್ಮಾಣುಜೀವಿಗಳ ಸಂಖ್ಯೆಯೂ ಹಾಗೆಯೇ. ಇದರಿಂದಾಗಿ ಮಣ್ಣಿನಲ್ಲಿ ಸಕ್ಕರೆ, ಅಮಿನೋ ಆಮ್ಲಗಳು ಉತ್ಪತ್ತಿ ಆಗುವುದಿಲ್ಲ. ಮಣ್ಣಿನ ಕಣಗಳ ನಡುವೆ ಅಂಟಿಕೊಳ್ಳುವ ಗುಣ ತೀರಾ ಕನಿಷ್ಠ. ಈ ಕಾರಣದಿಂದಾಗಿ ಇಲ್ಲಿ ನೀರು ಇಂಗುವುದು ಕಡಿಮೆ.' ಇದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಬಿಜಾಪುರ ಪ್ರಾದೇಶಿಕ ಸಂಶೋಧನಾ ಕೇಂದ್ರದ ಹಿರಿಯ ವಿಜ್ಞಾನಿ ಡಾ.ಮುದಕಪ್ಪ ಬಿ.ಗುಳೇದ್ ಅವರ ವಿಶ್ಲೇಷಣೆ.


ಅವರು ಮುಂದುವರಿಸುತ್ತಾರೆ, 'ಸವಕಳಿ ಮಾತ್ರ ಗಣನೀಯ ಪ್ರಮಾಣದಲ್ಲಿ ಇರುತ್ತದೆ. ಇಂಥಾ ಪ್ರದೇಶಗಳಲ್ಲಿ ಮಣ್ಣು–ನೀರಿನ ಸಂರಕ್ಷಣೆ ಅತ್ಯಂತ ಅಗತ್ಯ.'



**ರೈತ–ವಿಜ್ಞಾನಿಗಳ ಸಹಯೋಗ**

ಸಾಮಾನ್ಯವಾಗಿ ನಮ್ಮ ಸರಕಾರಿ ಸಂಶೋಧನಾ ಕೇಂದ್ರಗಳು ರೈತರ ಸಹಯೋಗದಲ್ಲಿ ಕೆಲಸ ಮಾಡುವುದು ತೀರಾ ಅಪರೂಪ. ಬಿಜಾಪುರದ ಪ್ರಾದೇಶಿಕ ಸಂಶೋಧನಾ ಕೇಂದ್ರ ಮತ್ತು ಡಾ. ಮಲ್ಲಣ್ಣ ಈಗ ಜತೆಜತೆಯಾಗಿ ಈ ಪ್ರದೇಶದ ಭೂ ಮತ್ತು ಕೃಷಿ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವುದು ವಿಶೇಷ ಬೆಳವಣಿಗೆ.

ಡಾ. ಮಲ್ಲಣ್ಣ ಹೊಲಗಳ ಬರ ನಿರೋಧಕ ಕಾಮಗಾರಿಯ ಪ್ಲಾನಿಂಗ್ ಮತ್ತು ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ. ಡಾ. ಗುಳೇದ್ ಮತ್ತವರ ಸಹೋದ್ಯೋಗಿಗಳು ಮಣ್ಣಿನ ಆರೋಗ್ಯ, ಬೆಳೆ ಆಯ್ಕೆ, ಬೆಳೆ ಸಂಯೋಜನೆ ಮತ್ತಿತರ ಕೃಷಿ ವಿಚಾರಗಳಲ್ಲಿ ಏನಾದರೂ ಬದಲಾವಣೆ, ಸರಿಪಡಿಸುವ ಕ್ರಮ ಬೇಕಾದರೆ



ಡಾ.ಮಲ್ಲಣ್ಣ ಮತ್ತು ಡಾ.ಗುಳೇದ್ ಹೊಲದಲ್ಲಿ ಪರಸ್ಪರ ಚರ್ಚೆಯಲ್ಲಿ.
ರೈತ – ವಿಜ್ಞಾನಿ ಸಹಯೋಗದ ಕೆಲಸ

ಅವನ್ನು ತಿಳಿಸಿಕೊಡುತ್ತಾರೆ. ಇದು ವಿಜ್ಞಾನಿ–ರೈತರುಗಳ ಜಂಟಿ ಅಭಿವೃದ್ಧಿ ಕೆಲಸಕ್ಕೆ ಒಂದು ಉತ್ತಮ ಉದಾಹರಣೆ.

ಬರ ನಿರೋಧಕ ಕೆಲಸ ಮಾಡಿದ–ಬರೇ ತಳ ಒಡ್ಡು ಮಾಡಿಕೊಂಡರೂ–ಮರುವರ್ಷದಿಂದಲೇ ಬೆಳೆವೃದ್ಧಿ ಶುರುವಾಗುತ್ತದೆ ಎನ್ನುವುದು ಡಾ. ಗುಳೇದ್ ನಿರೀಕ್ಷಣೆ. ಏಕೆಂದರೆ ಹೊಲದ ತೇವಾಂಶ ಹೆಚ್ಚುತ್ತದೆ. 'ಕೃಷಿಕ ಸರಿಯಾದ ಬೆಳೆ ಆಯ್ಕೆ ಮಾಡಿಕೊಂಡರೆ ಮೂರು ವರ್ಷಗಳಲ್ಲಿ ಹಾಕಿದ ವೆಚ್ಚವೆಲ್ಲಾ ಹಿಂದಿರುಗುತ್ತದೆ.'

## ನಡೆಯದ ಕನಸು

ಮಲ್ಲಣ್ಣ ನಾಗರಾಳ್ ಉತ್ತಮ ವಾಗ್ಮಿ. ಸ್ವತಃ ಆಶು ವಚನಗಳನ್ನು ರಚಿಸಿ ಹಾಡಬಲ್ಲರು. ಮೇಲ್ಮಣ್ಣಿನ ಮಹತ್ವ, ಮಣ್ಣು ನೀರು ಸಂರಕ್ಷಣೆ ಬಗ್ಗೆ ಜನಸಾಮಾನ್ಯರಿಗೆ ಅರ್ಥವಾಗುವಂತೆ ಗಂಟೆಗಟ್ಟಲೆ ಮಾತನಾಡಬಲ್ಲರು.

ಜತೆಗೆ ಇವರ ಸಾಧನೆಗಳ ವೀಡಿಯೋ ಅಥವಾ ಕನಿಷ್ಠ ಪವರ್‌ಪಾಯಿಂಟ್ ಪ್ರದರ್ಶನವಿದ್ದರೂ ಅದು ಹೆಚ್ಚೆಚ್ಚು ರೈತರನ್ನು ತಲಪಬಹುದು.

2005ರಲ್ಲಿ ಕೆ.ವಿ. ಪ್ರಭಾಕರ್ ಅವರು ಬಾಗಲಕೋಟೆಯ ಜಿಲ್ಲಾಧಿಕಾರಿಯಾಗಿದ್ದಾಗ ಅಲ್ಲೊಂದು ಜನಜಾಗೃತಿಯ ಕಾರ್ಯಕ್ರಮ ನಡೆದಿತ್ತು. ಆ ಸಂದರ್ಭದಲ್ಲಿ ಆಡಳಿತ ಬಹುಶಃ ಮೊದಲ ಬಾರಿಗೆ ಮಣ್ಣು–ನೀರು ಸಂರಕ್ಷಣೆಯ ಬಗ್ಗೆಯೇ ಮಾತನಾಡಲು ಮಲ್ಲಣ್ಣ ಅವರನ್ನು ಸಂಪನ್ಮೂಲ ವ್ಯಕ್ತಿಯಾಗಿ ಆಮಂತ್ರಿಸಿತು. ಜಲಜಾಥಾದಲ್ಲಿ ಅವರ ಪಾಲುಗಾರಿಕೆ ಸಾಕಷ್ಟು ಪರಿಣಾಮ ಬೀರಿತ್ತು. ಜಿಲ್ಲಾಧಿಕಾರಿ ಪ್ರಭಾಕರ್ ಇದರಿಂದ ತುಂಬ ಪ್ರಭಾವಿತರಾದರು. ಮಲ್ಲಣ್ಣನವರದೂ ಸೇರಿದಂತೆ 'ಬರನಿರೋಧಕ ಜಾಣ್ಮೆ'ಗಳ ಚಿತ್ರೀಕರಣ ಮಾಡಿ 'ಜಿಲ್ಲೆಯ ಉತ್ತಮ ಬೇಸಾಯ ಕ್ರಮಗಳು' ಎಂಬ ಒಂದು ವಿಡಿಯೋ ತಯಾರಿಸುವ ಉಮೇದು ಅವರಿಗಿತ್ತು. ದುರದೃಷ್ಟವಶಾತ್, ಅವರಿಗೆ ಬೇಗನೆ ಅಲ್ಲಿಂದ ವರ್ಗಾವಣೆಯಾಯಿತು.



## ಸದ್ದಿಲ್ಲದ ಮಹತ್ಕಾರ್ಯ

ನಾಗರಾಳರ ಮೂರು ಪೀಳಿಗೆಗಳ ಶತಮಾನದ ಅಭಿಯಾನ ವ್ಯರ್ಥವಾಗಿಲ್ಲ. ಮುದ್ರಿತ ಸಾಹಿತ್ಯ, ಜಾಗೃತಿ ಸಭೆಗಳ ನೆರವಿಲ್ಲದೇನೇ ಅದು ಬರವನ್ನು ದೂರವಿಟ್ಟಿದೆ.

ಮಲ್ಲಣ್ಣರ ಪ್ರಕಾರ ಹುನಗುಂದ ತಾಲೂಕಿನಲ್ಲಿ ರೈತರು ಪ್ರತಿವರ್ಷ ಅಂದಾಜು ಅರ್ಧ ಕೋಟಿ ರೂ.ಗಳಷ್ಟು ಬೆವರಿನ ಹಣವನ್ನು ಒಡ್ಡಿಗಾಗಿ ವೆಚ್ಚ ಮಾಡುತ್ತಾರೆ. ಇದರಲ್ಲಿ ಹತ್ತರಲ್ಲೊಂದು ಕೆಲಸ ಇವರ ಮಾರ್ಗದರ್ಶನದಲ್ಲಿ ನಡೆಯುತ್ತದೆ.

'ಹುನಗುಂದ ತಾಲೂಕಿನ ಹೆಚ್ಚಿನ ರೈತರೂ ತಳ ಒಡ್ಡನ್ನಾದರೂ ಮಾಡಿಸಿಕೊಂಡಿದ್ದಾರೆ. ಸೃಷ್ಟಿಸಿಕೊಂಡಿರುವ 'ಅಲ್ಪಸ್ವಲ್ಪ ಅಂಗಳ' ಅವರಿಗೆ ಕನಿಷ್ಠ ಮಳೆಯಲ್ಲೂ ಎಂಟುಹತ್ತು ಚೀಲ ಬೆಳೆ ಕೊಡುತ್ತಿದೆ. ಬಡಬಗ್ಗರೂ ಜೋಳಕ್ಕಾಗಿ ಅಂಗಡಿಗೆ ಚೀಲ ಒಯ್ದಿಲ್ಲ.'



## ಸ್ವಂತ ಕೆಲಸ ಮತ್ತು ಸರಕಾರಿ ಕೆಲಸ

'ತಮ್ಮದೇ ಹಣ ಬಳಸಿ ಒಡ್ಡು ಕಟ್ಟಿಕೊಳ್ಳುವ ಯಾವುದೇ ರೈತ ಅದನ್ನು ಎರಿ ಮಣ್ಣಿನಿಂದಲೇ ರಚಿಸುವುದಿಲ್ಲ,' ಮಲ್ಲಣ್ಣ ಬೊಟ್ಟು ಮಾಡುತ್ತಾರೆ, 'ಸರಕಾರಿ ಇಲಾಖೆ ನಿರ್ಮಿಸಿದ ಯಾವುದಾದರೊಂದು ಒಡ್ಡು ಐದು ವರ್ಷಕ್ಕಿಂತ ಹೆಚ್ಚು ಕಾಲ ಉಳಕೊಂಡಿರುವುದನ್ನು ನನಗೆ ತೋರಿಸಿ. ಸಾಂಪ್ರದಾಯಿಕ ಕ್ರಮದಲ್ಲಿ ರಚಿಸಿದ ಶತಮಾನ ಮೀರಿದ ರೈತ ಒಡ್ಡುಗಳು ನೂರಾರು ಇವೆ.'

ಧಾರವಾಡ ಕೃಷಿ ವಿಶ್ವವಿದ್ಯಾಲಯ ಈಚೆಗೆ ಮಲ್ಲಣ್ಣನಿಗೆ ಗೌರವ ಡಾಕ್ಟರೇಟ್ ಕೊಟ್ಟಿರುವುದು ಶ್ಲಾಘನೀಯ. ಆದರೆ, ದುರದೃಷ್ಟವಶಾತ್, ಸರಕಾರದ ಇಲಾಖೆಗಳು ಮಲ್ಲಣ್ಣನ ಅನುಭವಗಳನ್ನು ಸುತ್ತಲಿನಲ್ಲಿ ಹಬ್ಬಿಸಲು ಹೊರಟಿಲ್ಲ.



ಮಲ್ಲಣ್ಣ ಕುಟುಂಬದ ಜತೆ



ಸುತ್ತಮುತ್ತ ಇಷ್ಟೊಂದು ರೈತ ಆತ್ಮಹತ್ಯೆಗಳು ನಡೆಯುತ್ತಿದ್ದಾಗ, ಈ ಬರನಿರೋಧಕ ಜಾಣ್ಮೆಗಳಿಗೆ ಕನ್ನಡಿ ಹಿಡಿದು, ಪ್ರಾತ್ಯಕ್ಷಿಕೆ ತೋರಿಸಿ ರೈತ ಸಮುದಾಯಗಳ ಹತಾಶೆ ಕರಗಿಸುವ ಯತ್ನ ಮಾಡಬಹುದಿತ್ತು.


* * *

ಸಂಪರ್ಕ :

ಡಾ. ಮಲ್ಲಣ್ಣ ನಾಗರಾಳ

ಹುನಗುಂದ, ಬಾಗಲಕೋಟೆ ಜಿಲ್ಲೆ – 587118

ಮೊ: 9448307656



# ಶ್ರೀ ಪಡ್ರೆ



ಅಭಿವೃದ್ಧಿ ಪತ್ರಕರ್ತ. ಈಗ ಮಳೆಕೊಯ್ಲು, ನೆಲ–ಜಲ ಸಂರಕ್ಷಣೆಯಲ್ಲಿ ಸ್ಪೆಶಲೈಸೇಶನ್. 23 ವರ್ಷ ವಯಸ್ಸಿನ ಅಡಿಕೆ ಪತ್ರಿಕೆಯ ಸ್ಥಾಪಕ ಸಂಪಾದಕ. ಏಳು ವರ್ಷದ ಬಿಡುವಿನ ನಂತರ ಆಗಸ್ಟ್ 2006ರಿಂದ ಪುನಃ ಪತ್ರಿಕೆಯ ಸಂಪಾದಕತ್ವ, ಐದು ವರ್ಷಗಳ ಕಾಲ ವಿಜಯ ಕರ್ನಾಟಕದಲ್ಲಿ ಮಳೆಕೊಯ್ಲಿನ ಬಗ್ಗೆ ಅಂಕಣ – 'ಹನಿಗೂಡಿಸೋಣ.' www.indiatogether.com ಜಾಲತಾಣ ಮತ್ತು 'ಸಿವಿಲ್ ಸೊಸೈಟಿ'ಯಲ್ಲಿ ಇದೇ ವಿಷಯದ ಮೇಲೆ ಕಾಯಮ್ಮಾಗಿ ನುಡಿಚಿತ್ರ ಪ್ರಕಟಣೆ.

ಮಳೆಕೊಯ್ಲು, ನೆಲ–ಜಲ ಸಂರಕ್ಷಣೆಯ ಬಗ್ಗೆ 14 ಪುಸ್ತಕಗಳು ಪ್ರಕಟಿತ. ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರದ ಕನ್ನಡ ಪಠ್ಯಪುಸ್ತಕಗಳಲ್ಲಿ ಇವರು ಬರೆದ ಜಲಸಂರಕ್ಷಣೆಯ ಬಗೆಗಿನ ಪಾಠ ಸೇರಿಕೊಂಡಿದೆ. ಮಳೆಕೊಯ್ಲಿನ ಬಗ್ಗೆ ರಾಜ್ಯದುದ್ದಗಲದಲ್ಲಿ ನಾನ್ನೂರಕ್ಕೂ ಹೆಚ್ಚು ಸ್ಲೈಡ್ ಶೋ.

ಮೌಲ್ಯವರ್ಧನೆ, ನೇರ ಮಾರುಕಟ್ಟೆ ಹೀಗೆ ಕೃಷಿಕರಿಗೆ ಸ್ವಾವಲಂಬನೆಯ ಹಾದಿಯನ್ನು ತೋರುವಲ್ಲಿ ಲೇಖನಗಳ ಮೂಲಕ ಸತತ ಪ್ರಯತ್ನ. ಈ ನಿಟ್ಟಿನಲ್ಲಿ ಯುವ ಬರಹಗಾರರಿಗೆ ನಿರಂತರ ಪ್ರೋತ್ಸಾಹ. ಹಲಸಿನ ಬೆಳೆ ಮತ್ತು ಬಳಕೆಗೆ ನಿರ್ದಿಷ್ಟ ಗುರಿ

ಅರಸಿ ಬಂದ ಪ್ರಶಸ್ತಿಗಳು ಹಲವು. 'ಸ್ಟೇಟ್ಸ್‌ಮನ್' ಪತ್ರಿಕೆಯ ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಕರ್ನಾಟಕ ಸರಕಾರದ ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಇತ್ಯಾದಿ. ಅಶೋಕಾ ಫೆಲೋ. ಚೆನ್ನೈನ ವಿಲ್‌ಗ್ರೋ ಸಂಸ್ಥೆಯ 'ವರ್ಷದ ಪತ್ರಕರ್ತ' ಪ್ರಶಸ್ತಿ 2009ನೇ ಸಾಲಿಗಾಗಿ ಸಂದಿದೆ. ಇತ್ತೀಚೆಗೆ ಉತ್ತರ ಅಮೆರಿಕಾದ ಹವಾಯ್ ದ್ವೀಪದಲ್ಲಿ ಜರುಗಿದ ಹವಾಯ್ ಹಣ್ಣು ಬೆಳೆಗಾರರ ವಾರ್ಷಿಕ ಸಮ್ಮೇಳನದಲ್ಲಿ ಅತಿಥಿಯಾಗಿ ಭಾಗಿ, ಭಾರತದ ಭರವಸೆಯ ಮತ್ತು



ಅಸಾಮಾನ್ಯ ಹಣ್ಣುಗಳು ಮತ್ತವುಗಳ ಮೌಲ್ಯವರ್ಧನೆಯ ಬಗ್ಗೆ ದಿಕ್ಸೂಚಿ ಭಾಷಣ.

ಪ್ರಕಟಿತ ಪುಸ್ತಕಗಳು : ಬೆಂದ್ರ್ ತೀರ್ಥ ಮತ್ತು ಜಾಂಬ್ರಿ ಗುಹೆ, ನೆಲಜಲ ಉಳಿಸಿ, ನೆಲಜಲ ಸಂರಕ್ಷಣೆ, ಹನಿಗೂಡಿಸುವ ಹಾದಿಯಲ್ಲಿ, ಬಾನಿಗೊಂದು ಆಲಿಕೆ, ಮತ್ತೆ ರೂಪಾರೆಲ್ ಬತ್ತಲಿಲ್ಲ, ಗುಜರಾತಿನ ನೀರ ತಿಜೋರಿ – ಟಾಂಕಾ, ನೀರ ನೆಮ್ಮದಿಗೆ ನೂರಾರು ದಾರಿ, ನೀರ ಸಮಸ್ಯೆಗೆ ಇಲ್ಲಿವೆ ಪರಿಹಾರ, ಶರಣು ಬನ್ನಿ ಜಲಕಾಯಕಕೆ, ಮಣ್ಣು ಮತ್ತು ನೀರು, ಓಡಲು ಬಿಡದಿರಿ ಮಳೆನೀರ, ಕೃಷಿಕರ ಕೈಗೆ ಲೇಖನಿ (ಸಂ), ಕಟ್ಟಗಳು (ಸಂ. – ಡಾ. ವಾರಣಾಶಿ ಕೃಷ್ಣಮೂರ್ತಿ ಅವರೊಂದಿಗೆ), ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ!, Rain Water Harvesting.

ವಿಳಾಸ :

Post: Vaninagar
Via: Perla, Kasaragod
Kerala State - 671 552
04998-266148, 9448815284
shreepadre@gmail.com



## ಕೃಷಿ ಮಾಧ್ಯಮ ಕೇಂದ್ರ

ಕೃಷಿಕಪರ ಕೃಷಿಪತ್ರಿಕೋದ್ಯಮದ ಬೆಳವಣಿಗೆಗೆ ಪೂರಕವಾಗಿ ಡಿಸೆಂಬರ್ 3, 2000ದಂದು ಧಾರವಾಡದಲ್ಲಿ ಅಸ್ತಿತ್ವಕ್ಕೆ ಬಂದ ಕೃಷಿ ಮಾಧ್ಯಮ ಕೇಂದ್ರ ಈ ನಿಟ್ಟಿನಲ್ಲಿ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಅರ್ಥಪೂರ್ಣ ಕೃಷಿಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಕೇಂದ್ರ ಪ್ರತಿ ವರ್ಷ ರಾಜ್ಯಮಟ್ಟದ ಪ್ರಶಸ್ತಿ ನೀಡುತ್ತಿದೆ.


ಕೃಷಿಕರ ಅಗತ್ಯಗಳನ್ನಾಧರಿಸಿದ, ಅವರ ನೋವು–ನಲಿವುಗಳ ಮೇಲೆ ಬೆಳಕು ಚೆಲ್ಲುವ, ಅವರ ಸಮಸ್ಯೆಗಳ ಬಗ್ಗೆ ಜನಾಭಿಪ್ರಾಯ ಮೂಡಿಸುವ ವಸ್ತುನಿಷ್ಠ ಹಾಗೂ ವಿಚಾರಪೂರ್ಣ ಬರಹಗಳು ಕೃಷಿಪತ್ರಿಕೋದ್ಯಮವನ್ನು ಸದೃಢಗೊಳಿಸಬೇಕೆಂಬ ಆಶಯದೊಂದಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಕೇಂದ್ರ 2003ರಿಂದ ಕೃಷಿ–ಗ್ರಾಮೀಣ ಪತ್ರಿಕೋದ್ಯಮದಲ್ಲಿ ಒಂದು ವರ್ಷ ಅವಧಿಯ ಅಂಚೆ ತೆರಪಿನ(ಕರೆಸ್ಪಾಂಡೆನ್ಸ್) ತರಬೇತಿ ನಡೆಸುತ್ತಿದೆ. ಪ್ರಮುಖ ಅಭ್ಯುದಯ ಪತ್ರಕರ್ತರ ಮಾರ್ಗದರ್ಶನದಲ್ಲಿ ಕೃಷಿ–ಗ್ರಾಮೀಣ ವಿಚಾರಗಳ ಕುರಿತು ಸತ್ವಪೂರ್ಣ ಲೇಖನ ಬರೆಯುವವರನ್ನು ರೂಪಿಸುವುದು ಈ ತರಬೇತಿಯ ಉದ್ದೇಶ. ರಾಸಾಯನಿಕ ರಹಿತ ಕೃಷಿವಿಧಾನಗಳು, ದೇಶೀ ತಳಿಗಳ ಸಂರಕ್ಷಣೆ, ಗ್ರಾಮೀಣ ಅನುಶೋಧನೆ, ನೆಲಜಲ ಸಂರಕ್ಷಣೆ ಇವೇ ಮುಂತಾದ ವಿಷಯಗಳನ್ನು ಆಧರಿಸಿ ಲೇಖನ ಬರೆಯುವುದರ ಕುರಿತು ತರಬೇತಿಯಲ್ಲಿ ಒತ್ತುನೀಡಲಾಗುತ್ತಿದೆ. ಈ ವರೆಗೆ ಒಟ್ಟು 80 ಮಂದಿ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ್ದು, ಅವರನ್ನು 'ಕಾಮ್ ಫೆಲೋ'ಗಳೆಂದು ಗೌರವಿಸಲಾಗಿದೆ. ತರಬೇತಿಗೆ ಪೂರಕವಾಗಿ 'ಕಾಮ್ ನ್ಯೂಸ್' ಎಂಬ ವಾರ್ತಾಪತ್ರವನ್ನು ಪ್ರಕಟಿಸಲಾಗುತ್ತಿದೆ.

ಕನ್ನಡದಲ್ಲಿ ರೂಪುಗೊಂಡಿರುವ ಪರ್ಯಾಯ ಕೃಷಿಪತ್ರಿಕೋದ್ಯಮವನ್ನು ಇತರೆಡೆಗೆ ಪರಿಚಯಿಸುವುದೂ ಸೇರಿದಂತೆ ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಕೇಂದ್ರ ಆರಂಭದಲ್ಲೇ ಶುರುಮಾಡಿದ್ದ ಜಾಲತಾಣ ಇಂದು ಅನೇಕ ಸಮಾನಾಸಕ್ತರ



ಗಮನ ಸೆಳೆದಿದೆ. ಕೇಂದ್ರದಲ್ಲಿ ಪುಟ್ಟದೊಂದು ಗ್ರಂಥಾಲಯವಿದ್ದು, ಇದು ಸಾವಯವ ಕೃಷಿ, ನೆಲಜಲ ಸಂರಕ್ಷಣೆ, ಪರಿಸರ, ಮಾಧ್ಯಮ ಮುಂತಾದ ವಿಷಯಗಳ ಕುರಿತು ಅನೇಕ ಪುಸ್ತಕ ಹಾಗೂ ನಿಯತಕಾಲಿಕಗಳನ್ನು ಒಳಗೊಂಡಿದೆ. ಪುಸ್ತಕ ಪ್ರಕಟಣೆಯಲ್ಲೂ ಕೇಂದ್ರ ತೊಡಗಿಸಿಕೊಂಡಿದ್ದು, ಕೃಷಿ–ಗ್ರಾಮೀಣ ಯಶೋಗಾಥೆಗಳನ್ನು ಬಿಂಬಿಸುವ ಹದಿನೈದು ಪುಸ್ತಕಗಳನ್ನು ಹೊರತಂದಿದೆ.



# ಕೃಷಿ ಮಾಧ್ಯಮ ಕೇಂದ್ರದ ಪ್ರಕಟಣೆಗಳು

**ಸಾವಯವ ತಾರಸಿ ತೋಟ**
ಲೇ: ಅನುಸೂಯ ಶರ್ಮ
ಬೆಲೆ: ರೂ.30 (ಪ್ರತಿಗಳು ಮುಗಿದಿವೆ)

**ಜಲನೆಮ್ಮದಿಯತ್ತ ಕಾಕೋಳ – ತೆರೆದಬಾವಿ ಮರುಪೂರಣದ ಯಶೋಗಾಥೆ**
ಲೇ: ಪೂರ್ಣಪ್ರಜ್ಞ ಬೇಳೂರು
ಬೆಲೆ: ರೂ.40

**ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ!**
ಲೇ: ಶ್ರೀ ಪಡ್ರೆ
ಬೆಲೆ: ರೂ.15

**ಕಲ್ಲು ಹಾಸಿನ ಮೇಲೆ ಹಸಿರು ಹೊದಿಕೆ**
ಲೇ: ಆನಂದತೀರ್ಥ ಪ್ಯಾಟಿ
ಬೆಲೆ: ರೂ.15

**ಊಟ ಭರ್ಜರಿ, ಆದರೆ ಹೊಟ್ಟೆ ಖಾಲಿ!**
ಲೇ: ಶಿವರಾಂ ಪೈಲೂರು
ಬೆಲೆ: ರೂ.50

**ಹನಿಗೂಡಿ ಹಳ್ಳ**
ಅಡಿಕೆ ಪತ್ರಿಕೆಯಲ್ಲಿ ಪ್ರಕಟಗೊಂಡ ಉಪಯುಕ್ತ ಮಾಹಿತಿ ತುಣುಕುಗಳ ಸಂಗ್ರಹ
ಬೆಲೆ: ರೂ.30

**ಸಾವಯವದ ಹಾದಿ**
ಲೇ: ಈರಯ್ಯ ಕಿಲ್ಲೇದಾರ
ಬೆಲೆ: ರೂ.20

**ಮಿಶ್ರಕೃಷಿ–ಮೌಲ್ಯವರ್ಧನೆ–ನೇರ ಮಾರುಕಟ್ಟೆ: ಎಸ್.ಎಂ. ಪಾಟೀಲರ ಮಾದರಿ**
ಲೇ: ಲೀಲಾ ನಾ. ಕೌಜಗೇರಿ
ಬೆಲೆ: ರೂ.20

**ಸುಸ್ಥಿರ ಕೃಷಿ–ಸ್ವಾವಲಂಬಿ ಬದುಕು: ಕರೇಗೌಡ ದಂಪತಿ ಸಾಧನೆ**
ಲೇ : ಪೂರ್ಣಿಮಾ ತೀರ್ಥಮಲ್ಲೇಶ್
ಬೆಲೆ : ರೂ.20

**ಗಿಡಗೆಳೆತನದಿಂದ ಕೃಷಿಪ್ರೀತಿ ಬೆಳೆಸುವ ಎಡ್ವರ್ಡ್ ರೆಬೆಲ್ಲೋ**
ಲೇ : ನಾ. ಕಾರಂತ ಪೆರಾಜೆ
ಬೆಲೆ : ರೂ.20

**ಬೀಜಸ್ವಾತಂತ್ರ್ಯದ ಕಲ್ಪನೆಯನ್ನು ಸಾಕಾರಗೊಳಿಸಿದ ಭತ್ತದ ಬೋರೇಗೌಡರು**
ಲೇ : ಸೀಮಾ ಜಿ. ಪ್ರಸಾದ್
ಬೆಲೆ : ರೂ.20

**ಹೈನುಗಾರಿಕೆಯಿಂದ ಸ್ವಾವಲಂಬಿ ಬದುಕು**
ಲೇ : ಕಿಶನ್‌ರಾವ್ ಕುಲಕರ್ಣಿ
ಬೆಲೆ : ರೂ.20

ಬರವನ್ನೇ ಮಣಿಸಿದ ಮಲ್ಲಣ್ಣ

ಹೊಲ ತಿದ್ದಿಸಿದರೆ ಪ್ರಯೋಜನವಿದೆ ಎನ್ನುವುದನ್ನು ಹುನಗುಂದದ ಸುತ್ತಮುತ್ತಲ ರೈತರು ಪ್ರತ್ಯಕ್ಷ ಅನುಭವಿಸಿದವರು. ಹಿಡುವಳಿ ಸಣ್ಣದಿರಲಿ ಅಥವಾ ನೂರಾರು ಎಕರೆ ಇರಲಿ, ನಾಗರಾಳ ಕುಟುಂಬ ಶತಮಾನದ ಹಿಂದೆ ತಮ್ಮ ಹೊಲದಲ್ಲೇ ಪ್ರಾರಂಭಿಸಿದ ಈ ನೆಲ-ಜಲ ಸಂರಕ್ಷಣೆಯ ಮಾದರಿ ಉಪಯುಕ್ತವೆನಿಸಿದೆ. 'ಬರಕಾಮಗಾರಿ' ಎಂಬ ಮಾತು ಮತ್ತೆಮತ್ತೆ ಕೇಳಬರುತ್ತಿರುವ ಸದ್ಯದ ಸನ್ನಿವೇಶದಲ್ಲಿ ಬರನಿರೋಧಕ ಶಕ್ತಿಯನ್ನು ಭೂಮಿಯಲ್ಲಿ, ಆ ಮೂಲಕ ಕೃಷಿಕರಲ್ಲಿ ತುಂಬುವ ಇಂತಹ ಪ್ರಯೋಗಗಳ ಅಗತ್ಯವಿದೆ.



ಪ್ರಕಾಶನ
ಕೃಷಿ ಮಾಧ್ಯಮ ಕೇಂದ್ರ
ಧಾರವಾಡ
CENTRE FOR AGRICULTURAL MEDIA

# ಬರವನ್ನೇ ಮಣಿಸಿದ ಮಲ್ಲಣ್ಣ

• ಶ್ರೀ ಪಡ್ರೆ

